RNI:KARKAN/2021/85750 KPL/L/RNP/02/24-26

# ಕರುನಾಡ ಕಂದ

Volume 5 ಸಂಪುಟ 5 | Issue 02 ಸಂಚಿಕೆ 02 | Date 16-11-2025 | Page 16 ಪುಟ 16

ಬೆಲೆ: 20/-

FORTNIGHTLY ಪಾಕ್ಷಿಕ ಪತ್ರಿಕೆ


ಸಂಪಾದಕರು: ಬಸವರಾಜ ಬಳಿಗಾರ
ಫೋ.ನಂ: 9986366909

## ಕೈ ಮುಗಿದು ಏರು ಇದು ಕನ್ನಡಮಯ ತೇರು





## ಕೊಪ್ಪಳ : ಅಭೂತಪೂರ್ವ ಯಶಸ್ಸು ಕಂಡ ಹನ್ನೊಂದನೆಯ ಚುಟುಕು ಸಾಹಿತ್ಯ ಸಮ್ಮೇಳನ

## ತುಮಕೂರಿನ "ಗಾಣಿಗ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ" ವಿರುದ್ದ ಪೊಲೀಸ್ ಅಧೀಕ್ಷಕರಿಗೆ ದೂರು.






## ಯೋಗದಲ್ಲಿ ಸಾಧನೆ ಮಾಡಿದ ಎಸ್. ಪೂಜಾ: ಅತಿ ಚಿಕ್ಕ ವಯಸ್ಸಿನಲ್ಲಿ ಸಾಧನೆಯ ಗರಿಮೆ




## ವಿದ್ಯಾರ್ಥಿ ಜೀವನದಲ್ಲಿ ಮಾನಸಿಕ ಆರೋಗ್ಯದ ಪ್ರಾಮುಖ್ಯತೆ

## ಗಾಸಿಪ್ ಗಾಳಕ್ಕೆ ಸಿಲುಕದಿರಿ

## ಮನದ ತೊಳಲಾಟ.. ನಿತ್ಯ ಹೋರಾಟ

## ಸೂರ್ಯನೂರಿನ ಸೂರ್ಯ

ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16–11–2025 ಪುಟಗಳು:16

# ಕೈ ಮುಗಿದು ಏರು ಇದು ಕನ್ನಡಮಯ ತೇರು







**ಬಾಗಲಕೋಟೆ/ಇಲಕಲ್ಲ :** ಹಿರೇಕೆರೂರ ದಿಂದ ಗುಡ್ಡಾಪುರ , ಗುಡ್ಡಾಪುರದಿಂದ ಹಿರೇಕೆರೂರ ಮಾರ್ಗವಾಗಿ ಚಲಿಸುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ವಾಹನವು (ಬಸ್) ವಿಶೇಷವಾಗಿದ್ದು, ಕನ್ನಡಮಯವಾಗಿದೆ ಆ ವಾಹನವನ್ನು ನೋಡಿದರೆ ಕನ್ನಡ ಸಾಹಿತ್ಯದ ಜಗತ್ತೇ ಕಣ್ಣ ಮುಂದೆ ಬರುತ್ತದೆ ಕನ್ನಡದ ಕಟ್ಟಾ ಅಭಿಮಾನಿಗಳಾದ ಶ್ರೀಯುತ ಶಶಿ ಬೋಸ್ಲೆ ಆ ವಾಹನದ ನಿರ್ವಾಹಕನಾಗಿದ್ದಾರೆ ಚಾಲಕರಾದ ಅಂಜನಿ ಟಿ. ಅವರು ಸಹ ಸಹಕಾರ ನೀಡುತ್ತಿದ್ದಾರೆ ಸುಮಾರು ಆರು ವರ್ಷಗಳಿಂದ ಶಶಿ ಬೋಸ್ಲೆ ಅವರು ತಮ್ಮ ವಾಹನವನ್ನು ಕನ್ನಡದ ತೇರಾಗಿ ತಮ್ಮ ಸ್ವಂತ ಖರ್ಚಿನಿಂದ ಮಾರ್ಪಾಟು ಮಾಡುತ್ತಾ ಬಂದಿದ್ದಾರೆ ಕನ್ನಡದ ಉಕ್ತಿಗಳು, ನಾಡು ನುಡಿಗಳು, ಘೋಷ ವಾಕ್ಯಗಳು, ಅದಲ್ಲದೆ ಕನ್ನಡದ ಕವಿಗಳ, ದಾಸರ ಶ್ರೇಷ್ಠರ, ಶರಣರ ಭಾವ ಚಿತ್ರಗಳನ್ನು ಸೂಕ್ತವಾದ ಸ್ಥಳಗಳಲ್ಲಿ ಲಗತ್ತಿಸಿ , ಕೆಲವೊಂದು ಪತ್ರಿಕೆ, ಪುಸ್ತಕಗಳನ್ನು ಸಹ ಇರಿಸಿ, ವಾಹನದ ಪ್ರಯಾಣಿಕರು ಕುಳಿತುಕೊಳ್ಳುವ ಆಸನಗಳಿಗೆ ಹಳದಿ ಕೆಂಪು ಬಣ್ಣದ ಹೊದಿಕೆಗಳನ್ನು ಹಾಕಿ ಉಪಯುಕ್ತ ಮಾಹಿತಿಯೊಂದಿಗೆ ಒಳಭಾಗದಲ್ಲಿ ಅತ್ಯಂತ ಸುಂದರವಾಗಿ ಸಾಹಿತ್ಯಿಕವಾಗಿ ಅಲಂಕ-ರಿಸಿದ್ದಾರೆ ಒಟ್ಟಿನಲ್ಲಿ ಬಸ್ ನ ಒಳಭಾಗ ಹಾಗೂ ಹೊರಭಾಗ ಎಲ್ಲವೂ ಕನ್ನಡಮಯವಾಗಿದೆ ಅದು ವಾಹನವಲ್ಲ ನಡೆದಾಡುವ ಕನ್ನಡ ಲೋಕ ಎಂದರೂ ತಪ್ಪಾಗದು ಒಮ್ಮೆಯಾದರೂ ಆ ವಾಹನವನ್ನು ಒಳಗೆ ಮತ್ತು ಹೊರಗೆ ಖಂಡಿತವಾಗಿಯೂ ತಾವೆಲ್ಲರೂ ವೀಕ್ಷಿಸಬೇಕು ಎನ್ನುವಂತಿದೆ. ದಿನಾಂಕ 13 –11– 2025 ರಂದು ಗುಡ್ಡಾಪುರದಿಂದ ಇಲಕಲ್ಲ ನಗರದ ಬಸ್ ನಿಲ್ದಾಣದಲ್ಲಿ ಆಗಮಿಸಿದ ವಾಹನದ ನಿರ್ವಾಹಕ ಹಾಗೂ ಕನ್ನಡದ ಕಟ್ಟಾಳು ಶ್ರೀಯುತ ಶಶಿ ಬೋಸ್ಲೆ ಅವರ ಜೊತೆಗೆ ಚಾಲಕರಾದ ಅಂಜನಿ. ಟಿ. ಅವರುಗಳನ್ನು ಪ್ರೀತಿ, ಅಭಿಮಾನದಿಂದ ನಗರದ ಎಸ್. ವಿ. ಎಂ ಆಯುರ್ವೇದಿಕ್ ಮಹಾವಿದ್ಯಾಲಯದ ಚೇರ್ಮನ್ ರಾದ ಶ್ರೀ ರಾಜಶೇಖರ, ರೇವಣಸಿದ್ದಪ್ಪ, ಸೂಡಿ, ಗಣ್ಯ ವ್ಯಾಪಾರಿ ಮಲ್ಲಣ್ಣ ಹರವಿ, ಐ.ಟಿ.ಐ. ಉಪನ್ಯಾಸಕ ಮಹಾಂತೇಶ ಕಂದಕೂರ ಹಾಗೂ ಸಿಬ್ಬಂದಿ ತೆಲಿಕಟ್ ಮಠ, ಶಾರದಾ ಮಂದಿರದ ಧರ್ಮದರ್ಶಿಗಳು – ನಿವೃತ್ತ ಶಿಕ್ಷಕರು ನೀಲಕಂಠ ಕಾಳಗಿ, ದತ್ತಾತ್ರೇಯ ಮಲಾರಖಾನ ಸೇರಿದಂತೆ ಇನ್ನಿತರರು ಸನ್ಮಾನಿಸಿ, ಗೌರವಿಸಿ ಸಿಹಿ ನೀಡಿ ಸಂಭ್ರಮಿಸಿದರು. ಎಲ್ಲರೂ ಒಮ್ಮೆ ವಾಹನವನ್ನು ತಪ್ಪದೇ ನೋಡಿರಿ ಖಂಡಿತವಾಗಿಯೂ ತಮಗೆಲ್ಲ-ರಿಗೂ ಕನ್ನಡಾಭಿಮಾನ ಇನ್ನೂ ಹೆಚ್ಚಾಗುತ್ತದೆ ಹಾಗೂ ಬಹಳ ಖುಷಿ ಆಗುತ್ತದೆ ಎನ್ನುವುದು ನೆರೆದಿದ್ದ ಎಲ್ಲರ ಒಕ್ಕೊರಲಿನ ಅಭಿಪ್ರಾಯವಾಗಿತ್ತು.

– ಕರುನಾಡ ಕಂದ

# ತುಮಕೂರಿನ "ಗಾಣಿಗ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ" ವಿರುದ್ದ ಪೊಲೀಸ್ ಅಧೀಕ್ಷಕರಿಗೆ ದೂರು.




ಗಾಣಿಗ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಅಭಯಾಂಜನೇಯಸ್ವಾಮಿ ದೇವಾಸ್ಥಾನದ ಹತ್ತಿರದ ಮೇಳೇಕೋಟೆ ತುಮಕೂರು ಇಲ್ಲಿ ಸುಮಾರು ಹದಿನಾಲ್ಕು ವರ್ಷಗಳಿಂದ ಸೌಮ್ಯ ರವರು ಸದಸ್ಯರಾಗಿರುತ್ತಾರೆ ಮತ್ತು 2018 ರಲ್ಲಿ ತಲಾ 50,000 (ಐವತ್ತು ಸಾವಿರ) ರೂಪಾಯಿಗಳ ಎರಡು ಇಡುಗಂಟು ಠೇವಣಿಗಳನ್ನು ಇಟ್ಟಿರುತ್ತಾರೆ.

2023 ರಲ್ಲಿ ಠೇವಣಿಯನ್ನು ಹಿಂಪಡೆಯಲು ಕೇಳಿದಾಗ ಬಲವಂತದಿಂದ ಮತ್ತೆ ಮೂರು ವರ್ಷಕ್ಕೆ ಸೌಮ್ಯರವರ ಠೇವಣಿಯನ್ನು ನವೀಕರಿಸಿ ಕೊಟ್ಟಿದ್ದಾರೆ. ಆದರೆ ಹಲವು ತಿಂಗಳುಗಳಿಂದ ಸೌಮ್ಯ ರವರು ತಮ್ಮ ಇಡುಗಂಟನ್ನು ನಗದೀಕ-ರಿಸಲು ಪ್ರಯತ್ನ ಪಟ್ಟಿರುತ್ತಾರೆ ಆದರೆ ಗಾಣಿಗ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮತ್ತು ಆಡಳಿತ ಮಂಡಳಿಯ ಅಧ್ಯಕ್ಷರು ಯಾರೂ ಠೇವಣಿ ಹಣವನ್ನು ನಗದೀಕರಿಸಲು ( ಹಿಂಪಡೆಯಲು ) ಸ್ಪಂದಿಸುತ್ತಿರಲಿಲ್ಲ, ಸೌಮ್ಯರವರು ಹಲವಾರು ಬಾರಿ ಗಾಣಿಗ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಕಛೇರಿಗೆ ಅಲೆದರೂ ಆಡಳಿತ ಮಂಡಳಿ ಸೌಮ್ಯರವರ ಠೇವಣಿ ಹಣ ಬಿಡುಗಡೆ ಮಾಡಿ ನೀಡಿರುವುದಿಲ್ಲ ಹಾಗೂ ದೂರವಾಣಿ ಕರೆ ಮಾಡಿದರೂ ಸ್ವೀಕರಿಸುತ್ತಿರಲಿಲ್ಲ ಹಾಗೂ ಸೌಮ್ಯ ರವರಿಗೆ ಬರಬೇಕಾದ ನಿಯಮಿತವಾದ ಬಡ್ಡಿಯನ್ನು ಕೂಡಾ ಕೊಟ್ಟಿರುವುದಿಲ್ಲ, ಈ ಕುರಿತಾಗಿ ತುಮಕೂರಿನ ಜಿಲ್ಲಾ ಸಹಕಾರಿ ನಿಬಂಧಕರು ಇವರಿಗೆ ದೂರನ್ನು ನೀಡಿದರೂ ಪ್ರಯೋಜನವಾಗಿರುವುದಿಲ್ಲ.

ಗಾಣಿಗ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಅವ್ಯವಹಾರಕ್ಕೆ ಈಡಾಗಿರುವ ಸಾಧ್ಯತೆ ಮೇಲ್ನೋಟಕ್ಕೆ ಕಂಡುಬಂದಿರುವುದ-ರಿಂದ ಹಾಗೂ ಠೇವಣಿ ಹಣವನ್ನು ಹಿಂಪಡೆಯಲು ಸೌಮ್ಯರವರು ರವರು ತುಮಕೂರು ಪೊಲೀಸ್ ಅಧೀಕ್ಷಕ-ರಿಗೆ ತನಿಖೆಗಾಗಿ ದೂರನ್ನು ನೀಡಿರುತ್ತಾರೆ

ಮತ್ತು ಮೋಹನ್ ರವರು ಕೂಡ ಗಾಣಿಗ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಅವ್ಯವಹಾರಕ್ಕೆ ಈಡಾಗಿರುವುದು ಸಾಧ್ಯತೆ ಮೇಲ್ನೋಟಕ್ಕೆ ಕಂಡು ಬಂದಿರುವ ಕುರಿತಾಗಿ ತುಮಕೂರು ಪೊಲೀಸ್ ಅಧೀಕ್ಷಕರಿಗೆ ತನಿಖೆಗಾಗಿ ದೂರನ್ನು ನೀಡಿರುತ್ತಾರೆ. ಈ ಮೇಲಿನ ಎಲ್ಲಾ ವಿವರಗಳಿರುವ ಪತ್ರಿಕಾ ಪ್ರಕಟಣೆಯನ್ನು ಸೌಮ್ಯ ಮತ್ತು ಮೋಹನ್ ರವರು ನೀಡಿರುತ್ತಾರೆ.

## ವಿಶೇಷ ಸೂಚನೆ:

ಪತ್ರಿಕೆಯಲ್ಲಿ ಪ್ರಕಟವಾಗುವ ಕವನ,
ಲೇಖನ, ವಿಮರ್ಶೆ, ಅಂಕಣಗಳಲ್ಲಿ
ಇರುವ ವಿಷಯದಿಂದ ಯಾವುದೇ
ಜಾತಿ, ಧರ್ಮ, ಭಾಷೆ, ಸಂಘ ಸಂಸ್ಥೆಗಳ,
ಪಕ್ಷ ಅಥವಾ ವೈಯಕ್ತಿಕವಾಗಿ ಯಾರ
ಭಾವನೆಗೂ ಧಕ್ಕೆ ತರುವ ಉದ್ದೇಶ
ಪತ್ರಿಕೆಯದ್ದಾಗಿರುವುದಿಲ್ಲ ಹಾಗೂ ಅದರ
ಪರಿಪೂರ್ಣ ಹೊಣೆ
ಬರಹಗಾರರದ್ದು ಆಗಿರುತ್ತದೆ.

– ಸಂಪಾದಕ




ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ
ಕಾಲೇಜು ವಿದ್ಯಾರ್ಥಿಗಳ ಕೈಯಲ್ಲಿ
" ಕರುನಾಡ ಕಂದ ಪತ್ರಿಕೆ ".

ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16–11–2025 ಪುಟಗಳು:16

# ಕೊಪ್ಪಳ : ಅಭೂತಪೂರ್ವ ಯಶಸು ಕಂಡ ಹನ್ನೊಂದನೆಯ ಚುಟುಕು ಸಾಹಿತ್ಯ ಸಮ್ಮೇಳನ





ಕೊಪ್ಪಳ ನಗರಕ್ಕೆ ಐತಿಹಾಸಿಕ, ಸಾಂಸ್ಕೃತಿಕ, ಇತಿಹಾಸವಿದೆ, ರನ್ನ, ಪಂಪರಂತಹ ಕವಿಗಳೂ, ಕೊಪ್ಪಳ ಪ್ರದೇಶದ ಪ್ರಸ್ತಾಪ ಮಾಡಿರುವ ಉದಾಹರಣೆಗಳಿವೆ, ಇಂತಹ ಸಾಂಸ್ಕೃತಿ-ಕ ಪರಿಸರ ಹೊಂದಿರುವ ಕೊಪ್ಪಳದ ಸಾಹಿತ್ಯ ಭವನದಲ್ಲಿ ದಿ. 9.11.2025ರಂದು ಹನ್ನೊಂದನೆಯ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನ ಜರುಗಿತು.

ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ನಿವೃತ್ತ ಶಿಕ್ಷಕರು, ಸಾಹಿತಿಗಳೂ ಆದ ಶ್ರೀ ವೀರಣ್ಣ ವಾಲಿ ಅವರು ವಹಿಸಿದ್ದರು. ಸಮ್ಮೇಳನಕ್ಕೆ ಚುಟುಕು ಸಾಹಿತ್ಯ ಪರಿಷತ್ತಿನ ರಾಜ್ಯ ಸಂಚಾಲಕರಾದ ಡಾ. ಎಂ. ಜಿ. ಆರ್, ಅರಸ್ ಮತ್ತು ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಮಹಿಳಾ ಘಟಕದ ಅಧ್ಯಕ್ಷರೂ, "ಕೌಸ್ತುಭ," ಸಾಹಿತ್ಯ ಮಾಸಪತ್ರಿಕೆ ಸಂಪಾದಕರೂ ಆದ ಶ್ರೀಮತಿ ರತ್ನಾ ಹಾಲಪ್ಪ ಗೌಡ ಅವರೂ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಉಧ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಡಾ. ಎಂ. ಜಿ. ಆರ್. ಅರಸ್, ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ, ರತ್ನಾ ಹಾಲಪ್ಪ ಗೌಡರು ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು. ದಿವ್ಯ ಸಾನಿಧ್ಯವನ್ನು ಗಜೇಂದ್ರಗಡದ ಕಾಲ ಜ್ಞಾನ ಮಠದ ಶರಣ ಬಸವ ಸ್ವಾಮಿಯವರು ವಹಿಸಿದ್ದರು.

ಇದೇ ಸಂದರ್ಭದಲ್ಲಿ ಸಮ್ಮೇಳನದ ಅಧ್ಯಕ್ಷ ವೀರಣ್ಣ ವಾಲಿಯವರ ಸಮ್ಮೇಳನ ಕುರಿತ ಭಾಷಣದ ಪ್ರತಿಯನ್ನು ಬಿಡುಗಡೆಗೊಳಿಸಿದರು. ಮೈಸೂರಿನ ಕವಿಯತ್ರಿ ಶ್ರೀಮತಿ ಸೀತಾ ಲಕ್ಷ್ಮೀ ವರ್ಮಾ ಅವರ ಬಣ್ಣ ಬಣ್ಣದ ಬಿಂದಿಗಳು ಎಂಬ ಕವನ ಸಂಕಲನ ಲೋಕಾರ್ಪಣೆಯಾಯಿತು. ದಿವ್ಯ ಸಾನಿಧ್ಯ ವಹಿಸಿದ ಸ್ವಾಮೀಜಿಯವರು ಕೊಪ್ಪಳ ಜಿಲ್ಲೆಯ ಸಾಹಿತ್ಯಿಕ ಪರಿಸರವನ್ನು ಕೊಂಡಾಡಿ ಈ ನೆಲದಲ್ಲಿ ನಡೆಯುತ್ತಿರುವ ಸಮ್ಮೇಳನ ಯಶಸ್ವಿಯಾಗಲಿ ಎಂದು ಹರಸಿದರು. ಪ್ರಾಸ್ತಾವಿಕ ನುಡಿಗಳನ್ನಾಡಿದ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಡಾ. ಮಹಾಂತೇಶ ನೆಲಾಗಣಿ ಅವರು ಕೊಪ್ಪಳ ಜಿಲ್ಲೆ ಸಾಂಸ್ಕೃತಿಕವಾಗಿ ಮುಂಚೂಣಿಯಲ್ಲಿದೆ, ಇದಕ್ಕೆ ಚುಟುಕು ಸಾಹಿತ್ಯ ಪರಿಷತ್ತು ಅವಿರತವಾಗಿ ಶ್ರಮಿಸುತ್ತಾ ಹಲವಾರು ಕವಿಗೋಷ್ಠಿ, ಉಪನ್ಯಾಸ ಗೋಷ್ಠಿ ನಡೆಸುತ್ತಾ ಬಂದಿದೆ, ಇದಕ್ಕೆಲ್ಲಾ ಬುದ್ದಿಜೀವಿಗಳ, ಸಮಾಜ ಸೇವಕರ, ಹಿರಿಯ ನಾಗರಿಕ ಬಂಧುಗಳ ಸಹಕಾರವಿದೆ ಇದನ್ನು ಚುಟುಕು ಸಾಹಿತ್ಯ ಪರಿಷತ್ ಎಂದಿಗೂ ಮರೆಯದು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಈ ಹಿಂದೆ ಜಿಲ್ಲಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದ ಹನುಮಂತಪ್ಪ ಅಂಡಗಿ ಅವರ ಕಾರ್ಯವೈಖರಿಯನ್ನು ನೆನಪಿಸಿಕೊಂಡು ಅವರ ಅಕಾಲಿಕ ಮರಣಕ್ಕೆ ವಿಷಾದಿಸಿದರು, ಜನರಲ್ಲಿ ಜಾಗೃತಿ ಮೂಡಬೇಕಾದರೆ, ಇಂತಹ ಸಮ್ಮೇಳನಗಳ ಅವಶ್ಯಕತೆ ಇದೆ, ನಮ್ಮ ನೆಲ ಜಲ, ಭಾಷೆ ಬಗ್ಗೆ ನಮಗೆ ಅಭಿಮಾನವಿರಬೇಕು ಎಂದು ಹೇಳಿದರು.

ಸಮ್ಮೇಳನದ ಅಧ್ಯಕ್ಷರಾದ ವೀರಣ್ಣ ವಾಲಿಯವರು, ಕನ್ನಡ ಭಾಷೆ, ಈ ನೆಲದಲ್ಲಿಉಳಿಯಬೇಕೆಂದರೆ, ಪ್ರತಿಯೊಬ್ಬರೂ ಕನ್ನಡ ಮಾತುಗಳನ್ನಾಡಬೇಕು, ಸಾಹಿತ್ಯವನ್ನು ಓದಬೇಕು ಮತ್ತು ಇಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ಎಂ. ಜಿ ಆರ್. ಅರಸ್ ಮಾತನಾಡುತ್ತಾ ಇಂತಹ ಸಮ್ಮೇಳನವನ್ನು ಆಯೋಜಿಸಿರುವ ರುದ್ರಪ್ಪ ಭಂಡಾರಿ ಮತ್ತು ಅವರ ಕಾರ್ಯಕಾ-ರಿಣಿ ಸಮಿತಿಯ ಸದಸ್ಯರನ್ನು ಅಭಿನಂದಿಸುವೆ ಚುಟುಕು ಸಾಹಿತ್ಯವನ್ನು ನಾಡಿನ ತುಂಬಾ ಹರಡುವ ಶಕ್ತಿ ಈ ಕೊಪ್ಪಳದ ನೆಲಕ್ಕಿದೆ, ಅದಕ್ಕೆ ಈ ಸಮ್ಮೇಳನವೇ ಸಾಕ್ಷಿಯಾಗಿದೆ ಎಂದು ಹೇಳಿದರು.

ಸಮ್ಮೇಳನದ ಮೊದಲ ಗೋಷ್ಠಿಯಲ್ಲಿ ಕುಕನೂರು ತಾಲೂಕಾ ಚುಟುಕು ಪರಿಷತ್ ನ ಅಧ್ಯಕ್ಷರಾದ, ಬಸವರಾಜ ಉಪ್ಪಿನ, ಅವರು ಚುಟುಕು ಸಾಹಿತ್ಯ, ವೈಶಿಷ್ಟತೆ, ಮತ್ತು ಅವಲೋಕನ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡುತ್ತಾ ದಿನಕರ ದೇಸಾಯಿ, ರಾಜರತ್ನಂ, ಸಿ. ಪಿ ಕೆ, ಅವರಂತಹ ಹಿರಿಯ ಸಾಹಿತಿಗಳಿಂದ, ಸರ್ವಜ್ಞನಂತಹ ತ್ರಿಪದಿ ಸಾರ್ವಭೌಮನ ಕಾಲದಿಂದಲೇ ಪ್ರಚಲಿತವಾಗಿದೆ, ಹೇಳಬೇಕಾದುದನ್ನು ಕೇವಲ ಕೆಲವೇ ಸಾಲುಗಳಲ್ಲಿ ಹೇಳುವ ಚುಟುಕುಗಳು ಸಹೃದಯರನ್ನು ಆಕರ್ಷಿಸುತ್ತವೆ. ಅಂತಹ ಶಕ್ತಿ ಚುಟುಕು ಸಾಹಿತ್ಯಕ್ಕಿದೆ ಎಂದರು.

ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಕವಿ, ಶಿಕ್ಷಕ,ಮಹೇಶ ಬಳ್ಳಾರಿಯವರು ವಹಿಸಿ ಮಾತನಾಡಿ, ಕೊಪ್ಪಳ ಜಿಲ್ಲೆಯಲ್ಲಿ ಅನೇಕ ಕವಿಗಳು, ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿ, ಸಾಹಿತ್ಯಿಕ ವಾತಾವರಣ ನಿರ್ಮಿಸಿದ್ದಾರೆ, ಅವರೆಲ್ಲರಿಗೂ ಅಭಿನಂದನೆಗಳನ್ನು ತಿಳಿಸಿದರು.

ವೇದಿಕೆಯಲ್ಲಿ ಹಿರಿಯ ಸಾಹಿತಿಗಳಾದ ಡಾ. ಮಹಾಂತೇಶ ಮಲ್ಲನಗೌಡ್ರು, ಎಸ್. ಎಂ .ಕಂಬಾಳಿಮಠ, ರಾಜಶೇಖರ ಲಾಡಿ, ಕಳಕಪ್ಪ ಕುರಿ,ಎಂ.ಬಿ.ಅಳವಂಡಿ ಮೊದಲಾದವರಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ಅನ್ನಪೂರ್ಣ ಸಜ್ಜನ ನಿರೂಪಿಸಿ, ವಂದಿಸಿದರು.

ನಂತರದಲ್ಲಿ ಎರಡನೇ ಗೋಷ್ಠಿ, ವಿಚಾರ ಸಂಕಿರಣ ಕಾರ್ಯಕ್ರಮ ನಡೆಯಿತು. ಈ ವಿಚಾರ ಸಂಕಿರಣದ ವಿಷಯ, ಕೊಪ್ಪಳ ಜಿಲ್ಲೆಯ ಅಭಿವೃದ್ಧಿ ಸವಾಲುಗಳು, ಒಂದು ಚಿಂತನೆ ಎನ್ನುವುದಾಗಿತ್ತು. ಈ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ-ಕಾರರಾಗಿ, ಕರ್ನಾಟಕ ರಾಜ್ಯ ಕೃಷಿ ಬೆಲೆ ಆಯೋಗದ ಸದಸ್ಯರೂ ಪ್ರಗತಿಪರ ಹೋರಾಟಗಾರೂ ಆದ ಡಿ. ಎಚ್, ಪೂಜಾರ ಅವರು ಸದ್ಯದ ಸಾಮಾಜಿಕ ವ್ಯವಸ್ಥೆಯಲ್ಲಿ ಆರ್ಥಿಕ ಸುಧಾರಣೆಗಳ ಪ್ರಮಾಣ ಕುಸಿತವಾಗಿರುವುದನ್ನು ಅಂಕಿ ಅಂಶಗಳ ಮೂಲಕ ಸಮಗ್ರವಾದ ಚಿತ್ರಣ ನೀಡಿ ಮಾತನಾಡಿದರು, ಮತ್ತೊಬ್ಬ ಅತಿಥಿಗಳಾಗಿದ್ದ ಕೊಪ್ಪಳ ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕ ಡಾ. ಪ್ರವೀಣ ಪೋಲಿಸ್ ಪಾಟೀಲ, ಅವರು ಪ್ರಸ್ತುತ ಆರ್ಥಿಕವಾಗಿ ಭಾರತದ ಮುಂದಿರುವ ಸವಾಲುಗಳ ಕುರಿತು ಮಾತನಾಡಿದರು.

ವೇದಿಕೆಯಲ್ಲಿ ನಿವೃತ್ತ ಶಿಕ್ಷಕ ತೀರ್ಥಯ್ಯ ಮಠದ, ಕಾಶಿನಾಥ ಹಂಚಿನಾಳ, ಶಂಕರ ಲಿಂಗನಬಂಡಿ, ಅಕ್ಬರ್ ಸಿ. ಕಾಲಿಮಿರ್ಚಿ ಸೇರಿದಂತೆ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಗವಿಸಿದ್ದೇಶ್ವರ ಮಹಾವಿದ್ಯಾಲಯದ ಹಿರಿಯ ಅರ್ಥಶಾಸ್ತ್ರ ಪ್ರಾಧ್ಯಾಪಕ ಶರಣಬಸಪ್ಪ ಬಿಳಿಯಲಿ ಅವರು ಮಾತನಾಡುತ್ತಾ ಭಾರತದ ಅರ್ಥ ವ್ಯವಸ್ಥೆ, ಸಂಪೂರ್ಣವಾಗಿ ಅಲ್ಲವಾದರೂ ಸ್ವಲ್ಪ ಮಟ್ಟಿಗೆ ಸುಧಾರಣೆ ಕಾಣುವಲ್ಲಿ ಯಶಸ್ವಿಯಾಗಿರುವುದನ್ನು ನಾವು ಹೆಮ್ಮೆಯಿಂದ ಒಪ್ಪಿಕೊಳ್ಳಬೇಕು ಎಂದರು. ಕುಷ್ಟಗಿ ತಾಲೂಕ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಹಡಪದ ನಿರೂಪಿಸಿದರೆ, ಕುಕನೂರು ತಾಲೂಕಿನ ಚುಟುಕು ಸಾಹಿತ್ಯ ಪರಿಷತ್ ನ ಕಾರ್ಯದರ್ಶಿ ವಸಂತ ಗುಡಿಮನಿ ವಂದಿಸಿದರು.

ನಂತರ ಭೋಜನ ವಿರಾಮದ ಬಳಿಕ ಕವಿಗೋಷ್ಠಿ ಕಾರ್ಯಕ್ರಮ ಜರುಗಿತು. ಕವಿಗೋಷ್ಠಿ ಯ ಆಶಯ ನುಡಿಗಳನ್ನು, ಚುಟುಕು ಸಾಹಿತ್ಯ ಪರಿಷತ್ತಿನ ಸಂಘಟನಾ ಕಾರ್ಯದರ್ಶಿ ಶಿವಪ್ರಸಾದ್ ಹಾದಿಮನಿ ಅವರು ಹೇಳುತ್ತಾ ಜಿಲ್ಲೆಯ ಚುಟುಕು ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಾ ಅನೇಕ ಸಾಹಿತ್ಯ ಗೋಷ್ಠಿಗಳನ್ನು ಹಮ್ಮಿಕೊಂಡು ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತಿದೆ, ರುದ್ರಪ್ಪ ಭಂಡಾರಿಯವರ ನೇತೃತ್ವದಲ್ಲಿ ಬಹು ನಿರೀಕ್ಷೆಯ ಸಮ್ಮೇಳನ ಆಗುತ್ತಿರುವುದಕ್ಕೆ ನಮಗೆಲ್ಲಾ ಹೆಮ್ಮೆ ಇದೆ ಎಂದರು.

ಕವಿಗೋಷ್ಠಿಯಲ್ಲಿ ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ, ಕನಕಗಿರಿ, ಕಾರಟಗಿ, ಕುಕನೂರು ತಾಲೂಕುಗಳ ಕವಿ/ಕವಯತ್ರಿಯರು ಭಾಗವಹಿಸಿ ತಮ್ಮ ಚುಟುಕುಗಳನ್ನು ವಾಚಿಸಿ





ನೆರೆದ ಪ್ರೇಕ್ಷಕರನ್ನು ರಂಜಿಸಿದರು.

ಈ ಕವಿಗೋಷ್ಠಿಯಲ್ಲಿ ಸೋಮಶೇಖರ ಕಂಚಿ, ಶರಣಪ್ಪ ವಿದ್ಯಾನಗರ, ಶ್ರೀಮತಿ ರಾಧಾ ಉಮೇಶ, ಸುನಿತಾ ಪತಂಗರಾಯ, ಶ್ರೀನಿವಾಸ ದೇಸಾಯಿ, ಎ. ಪಿ. ಅಂಗಡಿ, ಪುಷ್ಪ ಲತಾ ಯೋಳಭಾವಿ, ಶ್ರೀಮತಿ ಶಿವಮ್ಮ, ಜಿ. ಅನ್ನಪೂರ್ಣ ಪದ್ಮಸಾಲಿ, ಶಿವಪ್ರಸಾದ್ ಹಾದಿಮನಿ, ಮೈಲಾರಪ್ಪ ಉಂಕಿ, ರವಿ ಎಸ್. ಹಿರೇಮನಿ, ಅಮೀನ ಸಾಬ್ ಮುಲ್ಲಾ, ಶಿವಮೂರ್ತಿ ಇಟಗಿ, ಸಾವಿತ್ರಿ ಮುಜಮದಾರ, ಮುಮ್ತಾಜ್ ಬೇಗಂ ಕನಕಗಿರಿ, ಕಲಾ ಮಾನ್ವಿ, ಬಸವರಾಜ ಉಪ್ಪಿನ, ಮಹೇಶ ಹಡಪದ ಮತ್ತು ಶರಣಪ್ಪ ಮಹಿಪತಿ ಸೇರಿದಂತೆ ಮುಂತಾದ ಐವತ್ತೆಂಟು ಜನ, ತಮ್ಮ ಚುಟುಕುಗಳನ್ನು ವಾಚಿಸಿದರು.

ಕವಿಗೋಷ್ಠಿಯ ಅಧ್ಯಕ್ಷತೆಯನ್ನು ವೀರಬಸಪ್ಪ ಪಟ್ಟಣಶೆಟ್ಟಿ ವಹಿಸಿ ಮಾತನಾಡಿದರು. ಕಾರ್ಯಕ್ರಮವನ್ನು ಮಂಜುನಾಥ ಚಿಕ್ಕೇನಕೊಪ್ಪ ಅವರು ನಿರೂಪಿಸಿ, ವಂದಿಸಿದರು.


ಕಾರ್ಯಕ್ರಮದ ಕೊನೆಯ ಹಂತ, ಸಮಾರೋಪ ಸಮಾರಂಭದ ದಿವ್ಯ ಸಾನಿಧ್ಯವನ್ನು ತಲೇಖಾನ್ ಮಠದ ಪೂಜ್ಯ ಶ್ರೀ ವೀರಭದ್ರ ಶರಣರು ವಹಿಸಿ, ಕೊಪ್ಪಳ ಜಿಲ್ಲೆಯ ಸಾಂಸ್ಕೃತಿ-ಕ ಪರಿಸರ, ಸಮೃದ್ಧವಾಗಿ ಇಂತಹ ಸಮ್ಮೇಳನ ನಡೆಯಲಿ ಎಂದು ಹಾರೈಸಿದರು. ಸಮಾರೋಪ ನುಡಿಗಳನ್ನು ಕೊಪ್ಪಳ ವಿಶ್ವ ವಿದ್ಯಾಲಯದ ಆಡಳಿತಾಧಿಕಾರಿಗಳಾದ ಪ್ರೊ. ತಿಮ್ಮಾರೆಡ್ಡಿ ಮೇಟಿಯವರು ನೆರವೇರಿಸಿದರು, ವೇದಿಕೆಯಲ್ಲಿದ್ದ ಸಿ. ವಿ ಜಡಿಯವರ್ ನಮ್ಮ ಜನಪದ ಸಾಹಿತ್ಯದಿಂದಲೇ ಚುಟುಕು ಸಾಹಿತ್ಯ ಹುಟ್ಟಿದೆ, ಅದು ಬೆಳವಣಿಗೆಯಾಗುತ್ತಾ ಸಾಗಿರುವುದು ಸಂತಸ ತಂದಿದೆ, ಎಂದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ರಾಜಕೀಯ ಧುರೀಣ-ರಾದ ಶಿವಣ್ಣ ರಾಯರಡ್ಡಿಯವರು ಸಾಹಿತಿಗಳು ಗಟ್ಟಿಯಾದ ಬರವಣಿಗೆಯನ್ನು ರೂಢಿಸಿಕೊಳ್ಳಬೇಕು, ಆ ಮೂಲಕ ರಾಜ-ಕಾರಣಿಗಳ ತಪ್ಪುಗಳನ್ನು ತಿದ್ದುವ ಕಾರ್ಯವಾಗಬೇಕಿದೆ ಎಂದರು. ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಾಹಿತ್ಯ ಪ್ರೇಮಿ, ಗಿರಿಜಾಶಂಕರ ಪಾಟೀಲ ಅವರು " ಯುವ ಜನಾಂಗ ಸಾಹಿತ್ಯಾಸಕ್ತಿ ಬೆಳೆಸಿಕೊಳ್ಳಬೇಕು" ಎಂದು ಕರೆ ನೀಡಿದರು.ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ರುದ್ರಪ್ಪ ಭಂಡಾರಿ ವಹಿಸಿ, ಅಧ್ಯಕ್ಷೀಯ ನುಡಿಗಳನ್ನಾಡಿದರು. ಒಟ್ಟಾರೆ ಕಾರ್ಯಕ್ರಮವು ಅಭೂತಪೂರ್ವವಾಗಿ ಯಶಸ್ವಿಯಾಗಿ ನೆರವೇರಿತು.

**– ಕರುನಾಡ ಕಂದ**

ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16

# ಕೃಷಿಕ ಕವಿಯ ಅಪರೂಪದ, ವಿಭಿನ್ನ ಶೈಲಿಯ "ರೈತನ ಬೆವರ ಹನಿಗಳು," ಹನಿಗವನ ಸಂಕಲನ.




ಪುಸ್ತಕ ಅವಲೋಕನ.

ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಹಿರೇವಡ್ಡಟ್ಟಿ ಒಂದು ಸಣ್ಣ ಗ್ರಾಮ, ಈ ಗ್ರಾಮದ ಕೊಟ್ರೇಶ ಜವಳಿ ಮೂಲತಃ ಕೃಷಿಕ ಕುಟುಂಬದಿಂದ ಬಂದವರಾಗಿದ್ದರೂ ಇವರಿಗೆ ಸರಸ್ವತಿ ಒಲಿದು ಬಿಟ್ಟಿದ್ದಾಳೆ, ಈ ಮಾತುಗಳನ್ನು ಮುಖ ಸ್ತುತಿಗಾಗಿ ಹೇಳುತ್ತಿಲ್ಲ, ಎಂಬುದನ್ನು ಸಹೃದಯರು ಗಮನಿಸಬೇಕು.

ಜೀವನ ನಿರ್ವಹಣೆಗೆ ಕೃಷಿಯನ್ನು ಅವಲಂಬಿಸಿದ ಕೊಟ್ರೇಶ ಮ. ಜವಳಿಯವರು ಪ್ರವೃತ್ತಿಯಿಂದ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯದಲ್ಲಿ ಒಲವನ್ನು ಹೊಂದಿ, ಅನೇಕ ಕವನ, ಶಾಯಿರಿ, ಟಂಕಾ, ಹಾಯ್ಕು, ಹನಿಗವನಗಳ ರಚನೆಯಲ್ಲಿ ತೊಡಗುವುದಷ್ಟೇ ಅಲ್ಲದೇ ಅವುಗಳನ್ನು ಇಂದಿನ ಸಾಮಾಜಿಕ ಜಾಲತಾಣಗಳಾದ ವಾಟ್ಸಾಪ್, ಫೇಸ್ಬುಕ್ ಇತರೆ ಸಾಮಾಜಿಕ ಜಾಲತಾಣಗಳ ಮುಖಾಂತರ ಓದುಗರಿಗೆ ತಲುಪಿಸುವ ಕಾರ್ಯದಲ್ಲಿ ನಿರತರಾಗಿ ಇದೀಗ ಸ್ವರಚಿತ ಹನಿಗವನ ಸಂಕಲನವನ್ನು ಲೋಕಾರ್ಪಣೆಗೊಳಿಸಿ ಸಾಹಿತ್ಯ ಲೋಕದ ಅಧಿಕೃತ ಪ್ರತಿನಿಧಿಯಾಗಿ ಕಾವ್ಯ ಕೃಷಿಯಲ್ಲಿ ನಿರತರಾಗಿರುವುದು ನಮಗೆಲ್ಲರಿಗೂ ಮಾದರಿಯಾಗಿದೆ ಎಂದು ಹೇಳಿದರೆ ಅತಿಶಯೋಕ್ತಿ ಯಾಗಲಾರದು. ಇಷ್ಟೆಲ್ಲಾ ಹೇಳಲು, ಅವರ "ರೈತನ ಬೆವರ ಹನಿಗಳು," ಹನಿಗವನ ಸಂಕಲನವು ಕಾರಣವಾಗಿದೆ.

ಮೂಲತಃ ರೈತರೇ ಆಗಿರುವ ಕೊಟ್ರೇಶ ಜವಳಿ ಅವರ ಈ ಹನಿಗವನ ಸಂಕಲನದಲ್ಲಿ ಒಟ್ಟು ಒಂದು ನೂರಾ ಎಂಬತ್ತೊಂದು " ಬೆವರ ಹನಿಗಳು " ಮಿಳಿತಗೊಂಡಿವೆ.

ವಿಷಯ ವೈವಿಧ್ಯತೆಯಿಂದ ಕೂಡಿದ ಈ ಸಂಕಲನದಲ್ಲಿ ಹಲವಾರು ಹನಿಗವಿತೆಗಳು ಸಹೃದಯರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿವೆ, ಅಂತಹ ಕೆಲವು ಹನಿಗಳನ್ನು ನೋಡುವುದಾದರೆ...

'ರೈತ ಪರ ' ಹನಿಯಲ್ಲಿ ರಾಜಕಾರಣಿಗಳು ಕೇವಲ ಆಶ್ವಾಸನೆ ಕೊಡುವುದು ಬೇಡ, ಎಂದು ಸೂಕ್ಷ್ಮವಾಗಿಯೇ ತಿವಿದು, ರೈತರ ಹಿತ ಕಾಪಾಡುವ ಕಾರ್ಯಕ್ಕೆ ಮುಂದಾಗಿ ಎಂಬ ಸೂಕ್ತ ಸಲಹೆಯನ್ನು ನೀಡಿದ್ದಾರೆ.

'ಮುಂಗಾರು ' ಮಳೆಯ ಸ್ವಾಗತ, ಇಳೆಯ ಬಯಕೆ ಈಡೇರಿ ಭೂಮಿತಾಯಿ ಸಂತೃಪ್ತಳಾಗಿರುವುದನ್ನು ಕೆಲವೇ ಸಾಲುಗಳಲ್ಲಿ ಹಿಡಿದಿಟ್ಟಿರುವುದು, ಎಲ್ಲ ಓದುಗರಿಗೂ ಇಷ್ಟವಾಗುತ್ತದೆ.ಅನ್ನದಾತ, ಮುಸ್ಸಂಜೆ, ಹನಿಮುತ್ತು, ತರಂಗದುಂಗುರ, ಅಂಧಕಾರ, ಲಜ್ಜಾಮಣಿ, ವಸುಂಧರೆ, ಕನಸು, ಗೀಜಗ, ವಸಂತ, ಹೀಗೇ ಹೆಸರಿಸುತ್ತಾ ಹೋಗಬಹುದು, ಇವರ ಸಾಹಿತ್ಯವು ಸಮಾಜ ಮುಖಿಯ ಚಿಂತನೆಗಳನ್ನು ಒಳಗೊಂಡಿದೆ, ಎನ್ನುವುದಕ್ಕೆ ಇಲ್ಲಿ ಸಂಕಲಿತ ವಾಗಿರುವ ಹತ್ತಾರು ಹನಿಗಳು ಸಾಕ್ಷಿಯಾಗಿವೆ. ಅಂತಹ ಕೆಲವು ಹನಿಗಳ ಸಾಲುಗಳನ್ನು ಆಸ್ವಾದಿಸೋಣ ಬನ್ನಿ...

'ಸಹಾಯ ಹಸ್ತ,' ಎಂಬ ಹನಿಗವನದಲ್ಲಿ,

**'ಅಮಾಯಕರ ಕೈ ಹಿಡಿಬೇಕು**
**ದಮನಿತರಿಗೆ ಸಹಾಯ ಮಾಡಬೇಕು,**
**ಸಂತ್ರಸ್ತರಿಗೆ ಸಾಂತ್ವಾನ ಹೇಳಬೇಕು,**
**ವಿಕಲಾಂಗರಿಗೆ ಜೀವನೋತ್ಸಾಹ ಕೊಡಬೇಕು,**
**ಹಿರಿಯರಿಗೆ ಗೌರವಿಸಬೇಕು**
**ಇದಕ್ಕೆಲ್ಲಾ ಔದಾರ್ಯತೆ ಬೇಕು'**



ಶಿವಪ್ರಸಾದ್ ಹಾದಿಮನಿ.
ಕನ್ನಡ ಉಪನ್ಯಾಸಕರು.
ಸ. ಪ್ರ. ದ. ಮಹಿಳಾ ಕಾಲೇಜು, ಕೊಪ್ಪಳ.
583231.
ಮೊ.7996790189.

**ಎಂದು ಹೇಳಿರುವ ಈ ಮಾತಿನಿಂದ ಕೊಟ್ರೇಶ ಜವಳಿಯವರ ವ್ಯಕ್ತಿತ್ವದ ಮುಖ ದರ್ಶನವಾಗುತ್ತದೆ,**

' ಪರೋಪಕಾರ ' ಎಂಬ ಹನಿಗವನದಲ್ಲೂ ಇಂತಹುದೇ ಆಶಯ ವ್ಯಕ್ತವಾಗಿದೆ, ಕಾಯಕವ ಮಾಡಿ ಅದರಲ್ಲೇ ಕೈಲಾಸ ಕಾಣಬೇಕು, ಎಂಬ ಆಶಯ ಹೊಂದಿರುವ ಜವಳಿಯವರು ಸೋಮಾರಿಗಳಿಗೆ ಛೀಮಾರಿ ಹಾಕುತ್ತಾರೆ, ಹಾರೈಕೆ, ಸೇವೆ, ಉದ್ಯೋಗ, ಬದುಕು, ಓಟ, ನಿಧಾನಿಸು, ಮುಂತಾದ ಹನಿಗವನಗಳಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. ರಾಜಕಾರಣಿಗಳ ಅಧಿಕಾರ ದಾಹ, ಆಮಿಷ, ಸ್ವಾರ್ಥ, ಮುಂತಾದ ಅವರ ಸಣ್ಣತನದ ಗುಣಗಳನ್ನು ತುಂಬಾ ಚೆನ್ನಾಗಿಯೇ ವಿಡಂಬಿಸಿದ್ದಾರೆ, ಉದಾಹರಣೆಗೆ ಅವಕೊಡ, ಇವ ಬಿಡ, ತಗಾದೆ, ಊಹಾಪೋಹ, ಮಾಲಿನ್ಯ ಸಾಹೇಬ ಇತ್ಯಾದಿ ಹನಿಗವನಗಳನ್ನು ಕಾಣಬಹುದು.

ಕೃಷಿಕ ಕವಿಯ ಈ ಹನಿಗವನ ಸಂಕಲನದ ಬಹುತೇಕ ಹನಿಗವನಳು ಸಹೃದಯ ಓದುಗರ ಗಮನ ಸೆಳೆಯುವಲ್ಲಿ ಸಫಲವಾಗಿದೆ. ಕೊಟ್ರೇಶ ಜವಳಿಯವರ ಲೇಖನಿಯಿಂದ ಸಮಾಜ ಸುಧಾರಣೆ ಆಗುವಂತಹ ಸಾಹಿತ್ಯ ಹೊರಹೊಮ್ಮಲಿ, ಇವರ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರಕಲಿ ಎಂಬ ಸದಾಶಯದೊಂದಿಗೆ ರೈತನ ಬೆವರ ಹನಿಗಳು, ಸಂಕಲನದ ಅವಲೋಕನಕ್ಕೆ ವಿರಾಮ ನೀಡುವೆ.

# ವೀರಭದ್ರ ಸನ್ನಿಧಿಯಲ್ಲಿ ಕಾರ್ತಿಕ ದೀಪೋತ್ಸವ

**ಯಾದಗಿರಿ/ ಗುರುಮಠಕಲ್:** (ನ. 14 ಶುಕ್ರವಾರ) ಕ್ಷೇತ್ರನಾಥ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಕಾರ್ತಿಕ ಮಾಸದ ದೀಪೋತ್ಸವ ಜರುಗಿತು.

ಹಿಂದೂ ಪಂಚಾಂಗದಲ್ಲಿ ಚಳಿಗಾಲದಲ್ಲಿ ಆರಂಭವಾಗುವ ಕಾರ್ತಿಕ ಮಾಸ ಅತ್ಯಂತ ಪವಿತ್ರ ಮತ್ತು ಶ್ರೇಷ್ಠ ಮಾಸ ಎಂದು ಕರೆಯಲಾಗುತ್ತದೆ. ಈ ಸಂದರ್ಭದಲ್ಲಿ ದೀಪಾರಾಧನೆ ಮಾಡಿದರೆ ಐಶ್ವರ್ಯ, ಸಂಪತ್ತು, ಆರೋಗ್ಯ ಭಾಗ್ಯ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯಿದೆ. ಈ ಕಾರಣಕ್ಕೆ ಪ್ರತಿ ವರ್ಷ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕ ದೀಪೋತ್ಸವ ಪ್ರತಿವರ್ಷ ಆಚರಿಸಲಾಗುತ್ತಿದ್ದು, ಹಿರಿಯರು ಕಿರಿಯರು ಎನ್ನದೆ ಎಲ್ಲರೂ ಭಾಗವಹಿಸಿ ದೀಪ ಹಚ್ಚಿ ಕಾರ್ಯಕ್ರಮಕ್ಕೆ ಹೆಚ್ಚಿನ ಮೆರುಗು ನೀಡಿದರು.

ಈ ದೀಪೋತ್ಸವದಲ್ಲಿ ವೀರಶೈವ ಲಿಂಗಾಯತ ಸಮಾಜ ಗುರುಮಠಕಲ್ ಅಧ್ಯಕ್ಷ ಶಿವಾನಂದ ಬೂದಿ, ಉಪಾಧ್ಯಕ್ಷರಾದ ರವಿಕುಮಾರ ವಾರದ, ಮಲ್ಲಯ್ಯ ಸ್ವಾಮಿ ವಸ್ತ್ರದ, ಪ್ರಧಾನ ಕಾರ್ಯದರ್ಶಿ ಜಗದೀಶ್ ಕುಮಾರ್ ಭೂಮಾ, ಸಂಘಟನಾ ಕಾರ್ಯದರ್ಶಿ ಶಿವಕುಮಾರ ಗದ್ವಾಲ್, ಖಜಾಂಚಿ ವಿಜಯರಾಜ ಶಾಸ್ತ್ರಿ, ನಿಕಟಪೂರ್ವ ಅಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ, ಶ್ರೀ ಶ್ರೀ ಮಾತಾ ಭದ್ರಕಾಳಿ ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ಸಿದ್ದಮ್ಮ ಗದ್ವಾಲ್ ಹಾಗೂ ಸದಸ್ಯರು, ಧರ್ಮವೀರ ವಾರದ, ಭದ್ರಯ್ಯ ಸ್ವಾಮಿ ಗದ್ವಾಲ್, ಆನಂದ ಶೇಖರ ಹಿರೇಮಠ, ಮಲ್ಲಿಕಾರ್ಜುನ ನಾರಾಗಡ್ಡ, ಸಮಾಜದ ಹಿರಿಯರು ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಸದ್ಭಕ್ತರು, ಬಡಾವಣೆಯ ವಾಸಿಗಳು ಭಾಗವಹಿಸಿದರು.


**ವರದಿ: ಜಗದೀಶ್ ಕುಮಾರ್ ಭೂಮಾ**





ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16

# ಸೂರ್ಯನೂರಿನ ಸೂರ್ಯ



ಒಂದು ವೈಚಾರಿಕ ಕಥೆ

ಸೂರ್ಯನೂರು ಎನ್ನುವುದು ಹೆಸರಿಗೆ ತಕ್ಕಂತೆ ಸೂರ್ಯನ ಮೊದಲ ಕಿರಣಗಳು ಬೀಳುವ ಹಳ್ಳಿ. ಆದರೆ, ಆ ಸೂರ್ಯನ ಕಿರಣಗಳು ಆ ಊರಿನ ಎಲ್ಲರ ಮನೆಗೂ ಸಮಾನವಾಗಿ ಬೀಳುತ್ತಿಲ್ಲ. ವಿಶೇಷವಾಗಿ, ಕೆಳ ಬೀದಿಯಲ್ಲಿದ್ದ ದಲಿತ ಕೇರಿಗೆ ಅವು ಕೇವಲ ಶಾಖವನ್ನು ಮಾತ್ರ ತರುತ್ತಿವೆ, ಗೌರವದ ಬೆಳಕನ್ನಲ್ಲ. ಆ ಕೇರಿಯಲ್ಲಿದ್ದ ಯುವಕನ ಹೆಸರು ಸಿದ್ಧಾರ್ಥ. ಆತ ಹೊಸ ಕಾಲದ ಕನಸುಗಾರ. ಓದಿನಲ್ಲಿ ಬುದ್ಧಿವಂತ. ಬೆಂಗಳೂರಿನಲ್ಲಿ ಕಂಪ್ಯೂಟರ್ ಸೈನ್ಸ್ ಮುಗಿಸಿ, ಒಳ್ಳೆಯ ಸಂಬಳದ ನೌಕರಿ ಹಿಡಿದಿದ್ದಾನೆ. ಆದರೆ, ಸಿದ್ಧಾರ್ಥನಿಗೆ ತನ್ನ ಹಳ್ಳಿಯ ಬೇರುಗಳ ಬಗ್ಗೆ ಅಭಿಮಾನವಿದೆ.

ಸಿದ್ಧಾರ್ಥನ ಮದುವೆ ನಿಶ್ಚಯವಾಗಿದೆ. ಪಟ್ಟಣದ ಜೀವನಕ್ಕೆ ಹೊಂದಿಕೊಂಡಿದ್ದರೂ, ತನ್ನ ಮದುವೆಯ ಮೆರವಣಿಗೆಯನ್ನು ತನ್ನೂರಿನ ರಸ್ತೆಯಲ್ಲೇ ನಡೆಸಬೇಕೆಂದು ಆತ ನಿರ್ಧರಿಸಿದ್ದಾನೆ. ಅದು ಒಂದು ಹೆಜ್ಜೆ ಮುಂದಿಟ್ಟು, ಶತಮಾನಗಳ ಅಜ್ಞಾನದ ಮೇಲೆ ನಡೆಯುವ ಹೆಜ್ಜೆಯಾಗಬೇಕೆಂದು ಆತನ ಆಸೆಯಾಗಿದೆ. "ಮಗನೆ, ಕುದುರೆ ಬೇಡ. ಆನೆಯ ಮೇಲೆ ಹೋಗು, ಇಲ್ಲಾಂದ್ರೆ ಒಳ್ಳೆ ಕಾರು ಇದೆ, ಅದರಲ್ಲಿ ಹೋಗು," ಎಂದು ಸಿದ್ಧಾರ್ಥನ ತಂದೆ ಮಲ್ಲಪ್ಪ ಆತಂಕದಿಂದ ಹೇಳಿದರು. "ಯಾಕೆ ಅಪ್ಪಾ? ಕುದುರೆ ಅಂದ್ರೆ ಮೇಲ್ಜಾತಿಯವರ ಪ್ರತಿಷ್ಠೆ ಅಂತ ನಮ್ಮ ನಾಗೇಶ್ ಮಾಮ ಲೇಖನದಲ್ಲಿ ಬರೆದಿದ್ರಲ್ಲ. ಆ ಪ್ರತಿಷ್ಠೆ ನಮ್ಮದಲ್ಲ ಅಂತ ತೋರಿಸೋ ಸಮಯ ಬಂದಿದೆ. ಈ ಬಾರಿ ನಾನು ಕುದುರೆ ಏರಿ ಮೆರವಣಿಗೆ ಹೋಗ್ತೀನಿ. ಇದು ಮದುವೆ ಮಾತ್ರ ಅಲ್ಲ, ನಮ್ಮ ಸಮಾನತೆಯ ಘೋಷಣೆ!" ಎಂದು ಸಿದ್ಧಾರ್ಥ ದೃಢವಾಗಿ ನುಡಿದನು.

ಸಿದ್ಧಾರ್ಥ ಕುದುರೆ ಬುಕ್ ಮಾಡಿದನು. ಮದುವೆಯ ದಿನ ಮೆರವಣಿಗೆ ಶುರುವಾಯಿತು. ಅಕ್ಷರಶಃ, ಸಿದ್ಧಾರ್ಥ ಗಾಂಭೀರ್ಯದ ಸಿಂಹಾಸನವನ್ನೇರಿ ಹೊರಟಂತಾಗಿದೆ. ಮೆರವಣಿಗೆ ಸೂರ್ಯನೂರಿನ ಮುಖ್ಯ ರಸ್ತೆಯನ್ನು ತಲುಪುತ್ತಿದ್ದಂತೆಯೇ, ವಾತಾವರಣದಲ್ಲಿ ಒಂದು ರೀತಿಯ ಉದ್ವಿಗ್ನತೆ ಶುರುವಾಯಿತು. ಗುಂಪೊಂದು ಮೆರವಣಿಗೆಯನ್ನು ನಿಲ್ಲಿಸಿತು. ಆ ಗುಂಪಿನ ನೇತೃತ್ವ ವಹಿಸಿದ್ದ, ಊರಿನ ಗೌಡರ ಮಗನಾದ ಪ್ರತಾಪ ಸಿಟ್ಟಿನಿಂದ ಕುದಿಯುತ್ತಿದ್ದಾನೆ.

"ಏಯ್ ಸಿದ್ಧ! ಯಾಕ್ರೀ ಈ ಕುದುರೆ ಗಿದುರೆ? ನಿಮ್ಮ ಮರ್ಯಾದೆ ಏನು ಅಂತ ಮರೆತು ಬಿಟ್ರಾ? ಕುದುರೆ ಏರೋಕೆ ನೀವು ಯಾರ್ರೀ? ಇದು ನಮ್ಮ ಗೌಡರ ಪದ್ಧತಿ, ನಿಮಗಲ್ಲ!" ಎಂದು ಪ್ರತಾಪ ಗರ್ಜಿಸಿದನು. "ಪ್ರತಾಪ, ಭಾರತದ ಸಂವಿಧಾನದ ಪ್ರಕಾರ ನಾವೆಲ್ಲರೂ ಸಮಾನರು. ನನ್ನ ಮದುವೆ ಮೆರವಣಿಗೆಯಲ್ಲಿ ಕುದುರೆ ಏರೋ ಹಕ್ಕು ನನಗಿದೆ. ಇದು ಯಾವುದೇ ಜಾತಿಯವರಿಗೆ ಮೀಸಲಾದ ಪ್ರಾಣಿಯಲ್ಲ," ಎಂದು ಸಿದ್ಧಾರ್ಥ ಶಾಂತವಾಗಿಯೇ ಉತ್ತರಿಸಿದನು.

ಪ್ರತಾಪನ ಮುಖ ರೋಷದಿಂದ ಕೆಂಪಾಗಿದೆ. "ಸಮಾನತೆನಾ? ನಿಮ್ಮಂತವರು ಬರಿ ನೆಲದ ಮೇಲೆ, ಕಾಲ್ನಡಿಗೆಯಲ್ಲಿ ಹೋಗಬೇಕು! ನೆಟ್ಟಗೆ ಕೆಳಗಿಳಿ! ಇಲ್ಲಾಂದ್ರೆ..." ಮಾತು ಮುಗಿಯುವ ಮೊದಲೇ, ಗುಂಪಿನಲ್ಲಿದ್ದ ಕೆಲವರು ಸಿದ್ಧಾರ್ಥನ ಕಡೆಗೆ ಕಲ್ಲುಗಳನ್ನು ಎಸೆಯಲು ಶುರು ಮಾಡಿದರು. ಇಡೀ ಪ್ರದೇಶದಲ್ಲಿ ಗದ್ದಲ, ಹಲ್ಲೆ ಶುರುವಾಯಿತು. ಮೆರವಣಿಗೆಯ ಬ್ಯಾಂಡ್ ಶಬ್ದ ಮಾಯವಾಗಿದೆ. ಆಕ್ರೋಶದ ಕೂಗುಗಳು ಕೇಳಿ ಬರುತ್ತಿವೆ. ಜೀವ ಬೆದರಿಕೆಯ ಮಾತುಗಳು ಮಾತ್ರ ಕೇಳತೊಡಗಿವೆ.

ಈ ಅನಿರೀಕ್ಷಿತ ಹಲ್ಲೆ ನಡೆಯುತ್ತಿದ್ದಾಗ, ಒಬ್ಬ ಮನುಷ್ಯ ಮೆರವಣಿಗೆಯಿಂದ ಹೊರಗೆ ನಿಂತಿದ್ದನು; ಆತನೇ ಪತ್ರಕರ್ತ ನಾಗೇಶ್. ಆತ ಇಡೀ ಘಟನೆಯನ್ನು ಮೊಬೈಲ್‌ನಲ್ಲಿ ವಿಡಿಯೋ ಮಾಡುತ್ತಿದ್ದಾನೆ. ಆತನ ಕಣ್ಣುಗಳಲ್ಲಿ ದಲಿತರ ಮೇಲಿನ ಹಿಂಸೆಯ ನೋವು ಇದೆ ! ಹೋರಾಟದ ದೀಪವೂ ಇದೆ.

ಹಿಂಸೆಯ ನಡುವೆಯೇ, ಮದುಮಗಳು ಸುಪರ್ಣಾ ಧೈರ್ಯವಾಗಿ ಮೆರವಣಿಗೆಯತ್ತ ಧಾವಿಸಿದಳು. "ಆಕಳು ನಿಮ್ಮ ತಾಯಿ, ಎಮ್ಮೆ ನಿಮ್ಮ ಮಲತಾಯಿ, ಎತ್ತು ಮತ್ತು ಹೋರಿ ನಿಮಗೆ ಅಪ್ಪ – ಚಿಕ್ಕಪ್ಪ ಆದರೆ, ಕುದುರೆ ನಿಮ್ಮ ತಂಗಿ ಅಂದ್ರೆ , ಕತ್ತೆ ಏನಾಗಬೇಕು ನಿಮಗೆ !? ನಾಚಿಕೆ ಆಗಲ್ವಾ ನಿಮಗೆ? ನಿಮ್ಮ ದೇವರನ್ನು ಪೂಜೆ ಮಾಡಿ, ನಿಮ್ಮ ತಾಯಿಗೆ ನಮಸ್ಕರಿಸಿ. ಆದರೆ, ಒಬ್ಬ ಮನುಷ್ಯನ ಗೌರವಕ್ಕೆ ಬೆದರಿಕೆ ಹಾಕೋಕೆ ನಿಮಗೆ ಯಾವ ಅಧಿಕಾರ ಇಲ್ಲ!" ಎಂದು ಸುಪರ್ಣಾ ಗಟ್ಟಿಯಾಗಿ ಕೇಳಿದಳು. ಅಷ್ಟರಲ್ಲಿ, ನಾಗೇಶ್‌ನ ವಿಡಿಯೋ ಕರೆಗೆ ಸ್ಪಂದಿಸಿದ ಪೊಲೀಸರು ಸ್ಥಳಕ್ಕೆ ಧಾವಿಸಿದರು. ಹಲ್ಲೆಕೋರರು ಚದುರಿ ಹೋದರು. ಪೊಲೀಸರು ಮಧ್ಯಸ್ಥಿಕೆ ವಹಿಸಿ, ಸಿದ್ಧಾರ್ಥನಿಗೆ ರಕ್ಷಣೆ ನೀಡಿ, ಆತನ ಕುದುರೆ ಮೆರವಣಿಗೆಯನ್ನು ಮುಂದೆ ಸಾಗಿಸಿದರು.

ಸೂರ್ಯನೂರಿಗೆ, ಆ ದಿನದ ಮೆರವಣಿಗೆ ಕೇವಲ ಒಂದು ಮದುವೆಯಲ್ಲ, ಅದೊಂದು ದಂಗೆಯ ಸಂಕೇತವಾಗಿತ್ತು. ಕುದುರೆ ಮೇಲಿದ್ದ ಸಿದ್ಧಾರ್ಥನಿಗೆ ಪ್ರತಿಷ್ಠೆ ಮುಖ್ಯವಾಗಿರಲಿಲ್ಲ, ತನ್ನ ಹಕ್ಕು ಮತ್ತು ಆತ್ಮಗೌರವ ಮುಖ್ಯವಾಗಿತ್ತು. ಮೆರವಣಿಗೆ ಯಶಸ್ವಿಯಾಗಿ ಮುಗಿದ ನಂತರ, ಸಿದ್ಧಾರ್ಥ ನಾಗೇಶ್‌ನನ್ನು ಭೇಟಿಯಾದನು. "ನಾಗೇಶ್ ಮಾಮ, ನಿಮ್ಮ ಲೇಖನ ನನ್ನ ಕಣ್ಣು ತೆರೆಸಿತು. ಕುದುರೆ ಕೇವಲ ಪ್ರಾಣಿಯಲ್ಲ, ಅದು ಸಮಾಜದ ಶ್ರೇಣಿ ವ್ಯವಸ್ಥೆಯ ಸಂಕೇತ. ಆ ಸಂಕೇತವನ್ನು ಪ್ರಶ್ನಿಸಿದಕ್ಕೆ ಈ ಹಲ್ಲೆ. ಆದ-'ರೂ, ನಿಮ್ಮ ಮಾತು ನೆನಪಿದೆ: ನಾವು ಒಂಟಿಯಲ್ಲ, ನಮ್ಮ ಹೋರಾಟ ಮುಂದುವ-ರಿಯುತ್ತದೆ," ಎಂದು ಸಿದ್ಧಾರ್ಥ ಕೃತಜ್ಞತೆಯಿಂದ ನುಡಿದನು.

ನಾಗೇಶ್ ಸಿದ್ಧಾರ್ಥನ ಭುಜದ ಮೇಲೆ ಕೈ ಇಟ್ಟು, "ಹೌದು ಮಗನೆ. ಅವರು ನಾಯಿ, ಹಂದಿ, ಆಕಳುಗಳನ್ನು ತಮ್ಮ ದೇವರನ್ನಾಗಿ, ತಾಯಿಯನ್ನಾಗಿ ಮಾಡಿಕೊಳ್ಳಬಹುದು. ಆದರೆ, ಮನುಷ್ಯನಿಗೆ ಮನುಷ್ಯನಂತೆ ಬದುಕುವ ಹಕ್ಕನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ. ನೀನು ಕುದುರೆ ಏರಿ ಸಂವಿಧಾನವನ್ನು ಎತ್ತಿ ಹಿಡಿದಿದ್ದೀಯ. ಈ ಹೋರಾಟ ಜಾತಿ ತಾರತಮ್ಯದ ಮೇಲೆ ಅಜ್ಞಾನದ ಅಹಂಕಾರದ ಸೋಲನ್ನು ತರುವವರೆಗೂ ನಿಲ್ಲುವುದಿಲ್ಲ," ಎಂದು ಹೇಳಿ ಅವನ ಬೆನ್ನು ತಟ್ಟಿದನು.

ಆ ದಿನದ ನಂತರ, ಸೂರ್ಯನೂರಿನಲ್ಲಿ ದಲಿತ ಸಮುದಾಯ ತಮ್ಮ ಹಕ್ಕುಗಳ ಬಗ್ಗೆ ಇನ್ನಷ್ಟು ಜಾಗೃತರಾದರು. ಸಿದ್ಧಾರ್ಥನ ಒಂದು ಹೆಜ್ಜೆ, ಇಡೀ ಸಮುದಾಯದ ಆತ್ಮಗೌರವದ ಹಾದಿಯ ಮೊದಲ ಬೆಳಕಾಯಿತು. ಸಿದ್ಧಾರ್ಥನ ಮದುವೆ ಮೆರವಣಿಗೆ ಸೂರ್ಯನೂರಿನ ಇತಿಹಾಸದಲ್ಲಿ ಬರೀ ಒಂದು ಘಟನೆಯಾಗಿ ಉಳಿಯಲಿಲ್ಲ, ಅದು ಒಂದು ಭೂಕಂಪನದಂತೆ ಇಡೀ ಜಾತಿ ಶ್ರೇಣಿಯನ್ನು ಅಲುಗಾಡಿಸಿದೆ.

ಸಿದ್ಧಾರ್ಥನ ಮೆರವಣಿಗೆಯ ಮೇಲೆ ಹಲ್ಲೆ ಮಾಡಿದ ಪ್ರತಾಪ ಮತ್ತು ಆತನ ಗುಂಪಿನ ಮೇಲೆ ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯಿದೆಯಡಿಯಲ್ಲಿ ಪ್ರಕರಣ ದಾಖಲಾಗಿದೆ. ಪತ್ರಕರ್ತ ನಾಗೇಶ್ ದಾಖಲಿಸಿದ ವಿಡಿಯೋ ಸಾಕ್ಷಿಯಾಗಿ ನ್ಯಾಯಾಲಯದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಆದರೆ, ನ್ಯಾಯದ ಹಾದಿ ಸುಗಮವಾಗಿರಲಿಲ್ಲ. ಪ್ರತಾಪನ ತಂದೆ ಗೌಡರು ಊರಿನಲ್ಲಿ ಪ್ರಭಾವಿಗಳಾಗಿದ್ದರಿಂದ, ಸಾಕ್ಷಿ ಹೇಳಬೇಕಿದ್ದ ದಲಿತ ಕೇರಿಯ ಜನರನ್ನು ಬೆದರಿಸಲಾಯಿತು. "ಕೇಸು ವಾಪಸ್ ತಗೊಳ್ಳಿ. ಇಲ್ಲಾಂದ್ರೆ ನಮ್ಮ ಜಮೀನಿನಲ್ಲಿ ಕೆಲಸ ಇಲ್ಲ, ನಿಮ್ಮ ಮಕ್ಕಳನ್ನು ಶಾಲೆಗೆ ಬಿಡೋಲ್ಲ," ಎಂದು ಆರ್ಥಿಕ ಬಹಿಷ್ಕಾರದ ಬೆದರಿಕೆ ಹಾಕಲಾಯಿತು.

ಈ ಸಂದರ್ಭದಲ್ಲಿ ಸಿದ್ಧಾರ್ಥ ಮತ್ತು ಆತನ ಪತ್ನಿ ಸುಪರ್ಣಾ ನಿಶ್ಚಲವಾಗಿ ನಿಂತರು. " ನಾವು ಅವರ ಬೆದರಿಕೆಗೆ ಮಣಿದರೆ, ಮುಂದೆ ಯಾವ ದಲಿತನೂ ತನ್ನ ಹಕ್ಕಿಗಾಗಿ ಧ್ವನಿ ಎತ್ತೋಕೆ ಆಗಲ್ಲ, " ಎಂದು ಸಿದ್ಧಾರ್ಥ ನಿರ್ಧರಿಸಿದನು. ಅವರು ನಾಗೇಶ್ ಮತ್ತು ದಲಿತ ಸಂಘಟನೆಗಳ ನೆರವಿನಿಂದ ವಕೀಲರನ್ನು ನೇಮಿಸಿದರು. ನ್ಯಾಯಾಲಯದಲ್ಲಿ ನಡೆದ ತೀವ್ರ ವಾದ-ಪ್ರತಿವಾದದ ನಂತರ, ನ್ಯಾಯಾಧೀಶರು ತೀರ್ಪು ನೀಡಿದರು: "ಯಾವುದೇ ನಾಗರಿಕ ತನ್ನ ಹಕ್ಕನ್ನು ಚಲಾಯಿಸಿದಾಗ, ಆತನ ಮೇಲೆ ದೈಹಿಕ ಅಥವಾ ಮಾನಸಿಕ ಹಿಂಸೆ ನೀಡುವುದು ಭಾರತದ ಸಂವಿಧಾನ ಮತ್ತು ಕಾನೂನಿನ ಸ್ಪಷ್ಟ ಉಲ್ಲಂಘನೆ. ಇದು ಕೇವಲ ಒಂದು ಕುಟುಂಬದ ಮೇಲಿನ ಹಲ್ಲೆಯಲ್ಲ, ಇದು ಸಮಾನತೆಯ ತತ್ವದ ಮೇಲಿನ ದಾಳಿ. ಆರೋಪಿಗಳಾದ ಪ್ರತಾಪ ಮತ್ತು ಆತನ ಸಹಚರರಿಗೆ ಕಠಿಣ ಶಿಕ್ಷೆ ವಿಧಿಸಲಾಗುವುದು."

ಈ ತೀರ್ಪು ಸೂರ್ಯನೂರಿನ ದಲಿತ ಸಮುದಾಯಕ್ಕೆ ದೊರೆತ ಮೊದಲ ದೊಡ್ಡ ಐತಿಹಾಸಿಕ ಜಯವಾಗಿದೆ. ನ್ಯಾಯಾಲಯದ ಆದೇಶದಿಂದ ಪ್ರತಾಪನಿಗೆ ಶಿಕ್ಷೆಯಾಗಿದ್ದರೂ, ಊರಿನ ಹಿರಿಯರ ಮತ್ತು ಗೌಡರ ಮನಸ್ಥಿತಿ ಅಷ್ಟು ಸುಲಭವಾಗಿ ಬದಲಾಗಲ್ಲ. ಆದರೆ, ಬದಲಾವಣೆ ನಿಧಾನವಾಗಿ ಆರಂಭವಾಗಿದೆ.

**ಯುವಕರ ಜಾಗೃತಿ:** ಶಿಕ್ಷಣ ಪಡೆದ ಸೂರ್ಯನೂರಿನ ದಲಿತ ಯುವಕರು ಈ ಘಟನೆಯಿಂದ ಪ್ರೇರಿತರಾಗಿದ್ದಾರೆ. ಸಿದ್ಧಾರ್ಥ ಮತ್ತು ಸುಪರ್ಣಾ ಅವರ ನೇತೃತ್ವದಲ್ಲಿ ಅವರು 'ಸೂರ್ಯನೂರು ಸಮಾನತಾ ಕೂಟ' ಎಂಬ ಸಂಘಟನೆಯನ್ನು ಸ್ಥಾಪಿಸಿದ್ದಾರೆ. ಇದು ಶೋಷಣೆಗೆ ಒಳಗಾದವರಿಗೆ ಕಾನೂನು ನೆರವು ನೀಡುವುದಲ್ಲದೆ, ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಶುರುಮಾಡಿದೆ..

**ಶೋಷಣೆಯ ವಿರುದ್ಧ ಧ್ವನಿ:** ದೇವಸ್ಥಾನ ಪ್ರವೇಶ ನಿಷೇಧ, ಸಾರ್ವಜನಿಕ ನಳದಲ್ಲಿ ನೀರು ಪಡೆಯಲು ತಾರತಮ್ಯದಂತಹ ಘಟನೆಗಳ ಬಗ್ಗೆ ಕೇರಿಯ ಜನ ಹೆದರದೆ ದೂರು ನೀಡಲು ಶುರುಮಾಡಿದ್ದಾರೆ. ಸಿದ್ಧಾರ್ಥನ ಹೋರಾಟ ಅವರಿಗೆ ಧೈರ್ಯ ತುಂಬಿದೆ.

**ಅಹಂಕಾರದ ಕರಗುವಿಕೆ:** ಗೌಡರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ದಲಿತ ಕಾರ್ಮಿಕರು, ಅವರಿಗೆ ನೀಡುತ್ತಿದ್ದ ಕಡಿಮೆ ಕೂಲಿಯ ವಿರುದ್ಧ ಧ್ವನಿ ಎತ್ತಿದರು. "ನಮ್ಮ ಶ್ರಮಕ್ಕೆ ನ್ಯಾಯಯುತ ಬೆಲೆ ಕೊಡಿ. ಇಲ್ಲಾಂದ್ರೆ ಸಾಮೂಹಿಕವಾಗಿ ಕೆಲಸಕ್ಕೆ ಬರುವುದಿಲ್ಲ," ಎಂದು ನಿರ್ಧರಿಸಿದರು. ಕೃಷಿ ಕೆಲಸಕ್ಕೆ ದಲಿತರ ಅವಶ್ಯಕತೆ ಇದ್ದಿದ್ದರಿಂದ, ಗೌಡರು ಅನಿವಾರ್ಯವಾಗಿ ಅವರ ಬೇಡಿಕೆಗಳಿಗೆ ಮಣಿಯಬೇಕಾಯಿತು. ಇದು ಆರ್ಥಿಕ ಸಬಲೀಕರಣ ಸಾಮಾಜಿಕ ಗೌರವಕ್ಕೆ ಹೇಗೆ ದಾರಿ ಮಾಡಿಕೊಡುತ್ತದೆ ಎಂಬುದನ್ನು ತೋರಿಸಿತು.

ಒಂದು ವರ್ಷದ ನಂತರ, ಸೂರ್ಯನೂರು ಸಮಾನತಾ ಕೂಟವು 'ಸಮಾನತಾ ದಿನ'ವನ್ನು ಆಚರಿಸಲು ನಿರ್ಧರಿಸಿತು. ಈ ಬಾರಿ ಅವರು ಸಿದ್ಧಾರ್ಥನ ಮದುವೆಯ ಕುದುರೆ ಮೆರವಣಿಗೆಯನ್ನು ಮತ್ತೊಮ್ಮೆ ಆಯೋಜಿಸಿದ್ದಾರೆ. ಆದರೆ, ಈ ಬಾರಿ ಮೆರವಣಿಗೆ ಸಂಪೂರ್ಣ ವಿಭಿನ್ನವಾಗಿದೆ. ನಾಗೇಶ್ ಲೇಖನದಲ್ಲಿ ಸಲಹೆ ನೀಡಿದಂತೆ, ಈ ಬಾರಿ ಸಿದ್ಧಾರ್ಥ ಕುದುರೆ ಬದಲಿಗೆ, ಗೌರವದ ಸಂಕೇತವಾದ ಆನೆಯ ಮೇಲೆ ಕುಳಿತಿದ್ದಾನೆ. ಆನೆ ಮೇಲೆ ಕುಳಿತ ಆತ ಮತ್ತು ಆತನ ಪಕ್ಕದಲ್ಲಿ ನಿಂತ ಸುಪರ್ಣಾ, ಸೂರ್ಯನೂರಿನ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ಹೊರಟರು.

**ಆದರೆ, ಅದಕ್ಕಿಂತ ಮುಖ್ಯವಾದ ವಿಷಯವೆಂದರೆ:** ಆನೆಯ ಮುಂದೆ, ಗೌಡರ ಕುಟುಂಬದ ಇಬ್ಬರು ಯುವಕರು ಮತ್ತು ಸೂರ್ಯನೂರಿನ ವಿವಿಧ ಜಾತಿಯ ವಿದ್ಯಾರ್ಥಿಗಳು ಜಾತಿ ತಾರತಮ್ಯದ ವಿರುದ್ಧ ಘೋಷಣೆ ಕೂಗುತ್ತಾ ಹೆಜ್ಜೆ ಹಾಕುತ್ತಿದ್ದಾರೆ. ಕುದುರೆಯ ಪ್ರತಿಷ್ಠೆಯ ಮೇಲೆ ನಡೆದಿದ್ದ ಹಲ್ಲೆ, ಇಂದು ಸಂವಿಧಾನದ ಆಶಯದ ಆನೆಯ ಮೇಲೆ ಕೂತು ಸಾಗುತ್ತಿದೆ. ಈ ಮೆರವಣಿಗೆಯಲ್ಲಿ ಯಾವುದೇ ಜಾತಿಯವರ ವಿರೋಧವಾಗಲಿ, ಹಲ್ಲೆಯಾಗಲಿ ನಡೆಯಲಿಲ್ಲ. ಬದಲಾಗಿ, ಊರಿನ ಕೆಲ ಹಿರಿಯರು ಆನೆಗೆ ಹಾರ ಹಾಕಿ ಗೌರವ ಸಲ್ಲಿಸಿದರು.

**ಆಗ ನಾಗೇಶ್, ಸಿದ್ಧಾರ್ಥನ ಪಕ್ಕದಲ್ಲಿ ಬಂದು ನಿಂತು, ಪಿಸುಗುಟ್ಟಿದ:** "ನೋಡು ಸಿದ್ಧಾರ್ಥ, ನೀನು ಒಂದು ದಿನ ಕುದುರೆ ಏರಿ ಬಂದಾಗ ಅವರಿಗೆ ಕೋಪ ಬಂದಿತ್ತು. ಏಕೆಂದರೆ ಅದು ಅವರ ಅಹಂಕಾರಕ್ಕೆ ಧಕ್ಕೆ ತಂದಿತ್ತು. ಇಂದು ನೀನು ಆನೆಯ ಮೇಲೆ ಬಂದಾಗ, ಅದರ ಜೊತೆಗೆ ಊರಿನ ಪ್ರತಿಯೊಂದು ಜಾತಿಯ ಯುವಕರೂ ನಿನ್ನ ಹಿಂದೆ ನಡೆಯುತ್ತಿದ್ದಾರೆ. ಇದು ಕೇವಲ ಜಾತಿ ತಾರತಮ್ಯದ ಸೋಲಲ್ಲ, ಇದು ಅಜ್ಞಾನದ ಅಹಂಕಾರದ ವಿಘಟನೆ!"

ಸಿದ್ಧಾರ್ಥ ಕಿರುನಗೆ ಬೀರಿ, "ಇದು ನಮ್ಮೆಲ್ಲರ ಗೆಲುವು ಮಾಮಾ. ನಾಯಿ, ಹಂದಿ, ಆಕಳುಗಳಿಗಿಂತ ಮಿಗಿಲಾದ ಮಾನವೀಯತೆಗೆ ದೊರೆತ ಜಯ." ಹೀಗೆ, ಸೂರ್ಯನೂರಿನಲ್ಲಿ ಜಾತಿ ತಾರತಮ್ಯ ಮತ್ತು ಅಜ್ಞಾನದ ಅಹಂಕಾರವು ಸಿದ್ಧಾರ್ಥ ಮತ್ತು ಸುಪರ್ಣಾರಂತಹ ಯುವ ಮನಸ್ಸುಗಳು ತೋರಿಸಿದ ಧೈರ್ಯ, ಶಿಕ್ಷಣ ಮತ್ತು ಕಾನೂನಿನ ಅರಿವು ಎಂಬ ತ್ರಿಶೂಲಕ್ಕೆ ಸೋಲನ್ನು ಒಪ್ಪಿಕೊಂಡಿತು. ಆ ಊರಿನಲ್ಲಿ ಈಗ ಎಲ್ಲರಿಗೂ ಸಮಾನವಾಗಿ ಸೂರ್ಯನ ಕಿರಣಗಳು ಬೀಳುತ್ತಿವೆ. ಸೂರ್ಯನೂರಿನ ಬಹುತೇಕ ಬಹುಜನರು ಜಾಗೃತರಾಗಿದ್ದಾರೆ. ನೀವೂ ಸಹ ಎಚ್ಚೆತ್ತುಕೊಳ್ಳಿ , ಜಾಗೃತರಾಗಿ, ಹೋರಾಡಲು ಸಿದ್ಧರಾಗಿ...



ಜಿ.ಎಲ್.ನಾಗೇಶ್
ಧನ್ನೂರ (ಆರ್.)
ಬಸವಕಲ್ಯಾಣ ತಾಲೂಕು
ಬೀದರ್ ಜಿಲ್ಲೆ 585330
ಮೊ.9945686234
glnagesh1985
@gmail.com

ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16

# ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ. ವತಿಯಿಂದ ಪೂರ್ವ ಭಾವಿ ಸಭೆ

ಚಾಮರಾಜನಗರ ಜಿಲ್ಲೆಯ ಹನೂರು ವಿಧಾನ ಸಭಾ ಕ್ಷೇತ್ರದಲ್ಲಿ ಕೃಷಿ ಮತ್ತು ಹೈನುಗಾರಿಕೆ ಬಿಟ್ಟು ಬೇರೆ ಏನಾದರೂ ಮಾಡಲು ಅವಕಾಶ ಕಡಿಮೆ, ಹೈನುಗಾರಿಕೆ ಸಹ ಮಾಡಲು ಆಗದೆ ಬೇರೆ ಬೇರೆ ಕಡೆ ಗುಳೆ ಹೋಗುತ್ತಿದ್ದಾರೆ ಎಂದು ಶಾಸಕ ಎಂ. ಆರ್. ಮಂಜುನಾಥ್ ತಿಳಿಸಿದರು.

ಹನೂರು ಪಟ್ಟಣದ ಚಾಮುಲ್ ಉಪ ಕಛೇರಿ ಆವರಣದಲ್ಲಿ 72 ನೇ ಅಖಿಲ ಭಾರತ ಸಹಕಾರ ಸಪ್ತಾಹ – 2025 ಸಮಾರೋಪ ಸಮಾರಂಭದ ಪ್ರಯುಕ್ತ ಹನೂರು ಕ್ಷೇತ್ರ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ದಿನಕ್ಕೆ 96 ಸಾವಿರ ಲೀ ಉತ್ಪಾದನೆ ಆಗುತ್ತಿರುವ ಹಾಲನ್ನು 2 ಲಕ್ಷಕ್ಕೆ ಹೆಚ್ಚಿಸಬೇಕು ಇದಕ್ಕೆ ಬೇಕಾದ ಸಹಕಾರವನ್ನು ನೀಡಲಾಗುವುದು, ಈ ಉಪ ಕಛೇರಿಯನ್ನು ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ಕರೆಯಬೇಕು, ಸರ್ಕಾರದಿಂದ ಬರುವ ಪ್ರತಿಯೊಂದು ಸೌಲಭ್ಯಗಳ ಮಾಹಿತಿಯನ್ನು ಎಲ್ಲಾ ಹಾಲು ಉತ್ಪಾದಕರ ಸಂಘಗಳು ತಿಳಿಸುವ ಕಾರ್ಯವನ್ನು ಮಾಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು. ಈ ಕ್ಷೇತ್ರದಲ್ಲಿ ಏನು ನನಗೆ ಅವಕಾಶ ಕೊಟ್ಟಿದ್ದೀರಾ ಅದರ ಪ್ರತಿ ಫಲವಾಗಿ ನಿಮ್ಮ ಋಣ ತೀರಿಸಲು ಶ್ರಮಿಸುತ್ತೇನೆ,

ಜಿಲ್ಲೆಯಲ್ಲಿ ನಾವು ಪ್ರಥಮ ಸ್ಥಾನದಲ್ಲಿದ್ದೇವೆ, ಇನ್ನೂ ಹೆಚ್ಚಿನ ಉತ್ಪಾದನೆಗೆ ತಮ್ಮ ಸಂಘಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳ ಕಲ್ಪಿಸಲು ಕ್ರಮ ವಹಿಸಲಾಗುವುದು. ಇದಕ್ಕೂ




ಮೊದಲು ಚಾಮುಲ್ ನಿರ್ದೇಶಕ ಮಾತನಾಡಿ ನಮ್ಮ ಸಂಘಕ್ಕೆ ಐಸ್ ಕ್ರೀಂ ಘಟಕ ಆಗಬೇಕು ಸರ್ಕಾರದಿಂದ ಬರಬೇಕಾಗಿರುವ 50 ಕೋಟಿ ರೂ. ಬರುವ ಹಾಗೆ ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿದರೆ ನಮ್ಮ ಗುಡ್ಡ ಗಾಡು ಪ್ರದೇಶದ ರೈತರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ ಹಾಗೂ ನಮ್ಮ ಸಂಸ್ಥೆಯು ಇನ್ನೂ ಹೆಚ್ಚು ಪ್ರಗತಿ ಹೊಂದುತ್ತದೆ ಎಂದರು.

ಚಾಮುಲ್ ಅಧ್ಯಕ್ಷರು ನಂಜುಂಡ ಸ್ವಾಮಿ ಮಾತನಾಡಿ ದಿನಕ್ಕೆ ಎರಡು ಬಾರಿ ಬರುವ ಹಾಲಿನ ಗುಣಮಟ್ಟ ಕಾಪಾಡಬೇಕು ಅದಕ್ಕೆ ಬೇಕಾಗುವ ಸವಲತ್ತುಗಳಿಗೆ ಸಹಕರಿಸುತ್ತೇವೆ ಹಾಗೆಯೇ ಉಪ ಉತ್ಪನ್ನಗಳಿಂದ ರೈತ–ರಿಗೆ ಅನುಕೂಲವಾಗುವ ಹಾಗೆ ಹಾಗೂ ಸರ್ಕಾರದಿಂದ ಬರುವಂತಹ ಸವಲತ್ತುಗಳನ್ನು ರೈತರಿಗೆ ನೇರವಾಗಿ ತಲುಪಿಸುವಂತಹ ಕಾರ್ಯಕ್ರಮಗಳು ಆಗುತ್ತವೆ ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ ಚಾಮುಲ್ ನಿರ್ದೇಶಕರುಗಳಾದ ಮಹಾದೇವಸ್ವಾಮಿ ( ಉದ್ದನೂರು ಪ್ರಸಾದ್), ಶಾಹುಲ್ ಅಹಮದ್ (ತಾರೀಖ್), ಮಾಜಿ ಅಧ್ಯಕ್ಷ ಗುರುಮಲ್ಲಪ್ಪ, ವ್ಯವಸ್ಥಾಪಕ ನಿರ್ದೇಶಕ ಕೆ ರಾಜಕುಮಾರ್, ಪ್ರಭಾರ ವ್ಯವಸ್ಥಾಪಕ ಶರತ್ ಕುಮಾರ್, ವಿಸ್ತರಣಾಧಿಕಾರಿಗಳಾದ ವೆಂಕಟೇಶ್, ರಘು, ಸೋಮಶೇಖರ್, ಶ್ರೀನಿವಾಸ್ ಪ್ರಸಾದ್, ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ರಾಯಪ್ಪ, ವಿವಿಧ ಗ್ರಾಮಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯ ನಿರ್ವಾಹಕರು ಹಾಜರಿದ್ದರು.

**ವರದಿ ಉಸ್ಮಾನ್ ಖಾನ್**

---

# ಜವಹರ್‌ಲಾಲ್ ಅವರ ಕೊಡುಗೆ ಅಪಾರ : ಶಾಲಾ ಸಂಸತ್‌ನ ಸಿ. ಎಂ. ರಂಜಿತ



**ಬಳ್ಳಾರಿ / ಕಂಪ್ಲಿ:** ತಾಲೂಕಿನ ಮೆಟ್ರಿ ಗ್ರಾಮದ ಹೊನ್ನಳ್ಳಿ ಸಿದ್ದಪ್ಪನವರ ಸರ್ಕಾರಿ ಹಿರಿಯ ಮತ್ತು ಪ್ರೌಢಶಾಲೆಯಲ್ಲಿ ಮಾಜಿ ಪ್ರಧಾನಮಂತ್ರಿ ಜವಹರ್‌ಲಾಲ್ ನೆಹರು ಜನ್ಮದಿನದ ಪ್ರಯುಕ್ತದ ಮಕ್ಕಳ ದಿನಾಚರಣೆ ಅಂಗವಾಗಿ ಪೋಷಕರ ಮತ್ತು ಶಿಕ್ಷಕರ ಮಹಾಸಭೆ ನಡೆಯಿತು.

ಮಕ್ಕಳ ಸಭೆಯ ಉದ್ಘಾಟಿಸಿ ಶಾಲಾ ಸಂಸತ್‌ನ ಮುಖ್ಯಮಂತ್ರಿ ವಿದ್ಯಾರ್ಥಿನಿ ರಂಜಿತ ಮಾತನಾಡಿ, ನಾಡಿನಲ್ಲಿ ಜವಾಹರ್‌ಲಾಲ್ ಅವರು ನೀಡಿದ ಕೊಡುಗೆ ಅಪಾರವಾಗಿದೆ, ಇಂದಿನ ಮಕ್ಕಳೇ ಇಂದಿನ ಪ್ರಜೆಗಳು ಎಂಬಂತೆ ನಾವು ಶಿಕ್ಷಕರು ನೀಡುವ ಪಾಠ, ಪ್ರವಚನ ಸೇರಿದಂತೆ ಪ್ರತಿಯೊಂದು ಜೀವನ ಮೌಲ್ಯದ ವಿಷಯಗಳನ್ನು ಆಲಿಸಿ, ಉತ್ತಮ ಪ್ರಜೆಗಳಾಗಿ ಹೊರಹೊಮ್ಮುವುದು ನಮ್ಮ ಕರ್ತವ್ಯವಾಗಿದೆ. ಕಲಿಕಾ ಹಂತದಲ್ಲಿ ಒಳ್ಳೆಯ ಶಿಕ್ಷಣ ಪಡೆದು, ಪೋಷಕರ ಆಸೆ, ಆಕಾಂಕ್ಷೆಯಂತೆ ದೊಡ್ಡ ದೊಡ್ಡ ಹುದ್ದೆಗಳೊಂದಿಗೆ ಭವಿಷ್ಯ ರೂಪಿಸಿಕೊಳ್ಳಬೇಕಾಗಿದೆ ಎಂದರು.

1ರಿಂದ 9ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಹಾಗೂ ಕ್ರೀಡೆಗಳಲ್ಲಿ ವಿಜಯಶಾಲಿಯಾದ ವಿದ್ಯಾರ್ಥಿಗಳಿಗೆ ಪೆನ್ನು, ಪೆನ್ಸಿಲ್ ಸೇರಿದಂತೆ ಬಹುಮಾನಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷ ಹುಲುಗಪ್ಪ, ಉಪಾಧ್ಯಕ್ಷೆ ಅಂಬಿಕಾ ಬಸವರಾಜ, ಮುಖ್ಯಗುರುಗಳಾದ ವಿ. ಆರ್. ಮೂರ್ತಿ, ನಿರ್ಮಲಾ, ಸಹ ಶಿಕ್ಷಕರಾದ ಚಂದ್ರಪ್ಪ ಕಂಬಳಿ, ರೇಖಾ, ಮಡಿವಾಳಪ್ಪ, ಅನುಸೂಯಾ, ಶಿಲ್ಪ, ರಾಜೇಶ್ವರಿ, ಕಾವ್ಯ, ಶಿಕ್ಷಣ ಪ್ರೇಮಿ ಹಂಪಾರೆಡ್ಡಿ ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ವರದಿ : ಜಿಲಾನಸಾಬ್ ಬಡಿಗೇರ್**

---

# ಮಕ್ಕಳ ಭವಿಷ್ಯ ಶಿಕ್ಷಕರ ಕೈಯಲ್ಲಿದೆ : ಗ್ರಾ. ಪಂ. ಅಧ್ಯಕ್ಷೆ ಪೂಜಾರಿ ಈರಮ್ಮ

**ಬಳ್ಳಾರಿ / ಕಂಪ್ಲಿ:** ತಾಲೂಕಿನ ದೇವಲಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಯಲ್ಲಿ ಮೆಟ್ರಿ ಕ್ಲಸ್ಟರ್‌ವತಿಯಿಂದ ಬದಲಾವಣೆ ಶಿಕ್ಷಣ ಭವಿಷ್ಯದ ನಿರ್ಮಾಣ ಎಂಬಂತೆ ಪೋಷಕರ–ಶಿಕ್ಷಕರ ಮಹಾಸಭೆ ಶುಕ್ರವಾರ ನಡೆಯಿತು.

ಗ್ರಾ. ಪಂ ಅಧ್ಯಕ್ಷೆ ಪೂಜಾರಿ ಈರಮ್ಮ ರಮೇಶ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಕ್ಕಳ ಭವಿಷ್ಯ ಶಿಕ್ಷಕರ ಕೈಯಲ್ಲಿದೆ. ಪ್ರತಿಯೊಂದು ಹಂತದಲ್ಲಿ ಗುಣಾತ್ಮಕ ಶಿಕ್ಷಣ ನೀಡುವ ಮೂಲಕ ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸಬೇಕಾಗಿದೆ, ಶಿಕ್ಷಣದ ಜೊತೆಗೆ ವ್ಯಕ್ತಿತ್ವ ವಿಕಾಸ ಅತಿಮುಖ್ಯವಾಗಿದೆ ಎಂದರು.

ಮುಖ್ಯಗುರು ಎಚ್. ಪಿ. ಸೋಮಶೇಖರ ಮಾತನಾಡಿ, ಮಕ್ಕಳಲ್ಲಿ ಒಳ್ಳೆಯ ಶಿಕ್ಷಣ ನೀಡುವುದು ಪ್ರತಿಯೊಬ್ಬ ಶಿಕ್ಷಕರ ಕರ್ತವ್ಯವಾಗಿದೆ. ಇಂದಿನ ಮಕ್ಕಳೇ ಇಂದಿನ ಪ್ರಜೆಗಳು ಎಂಬಂತೆ ಶಿಕ್ಷಣವನ್ನು ಪಡೆದುಕೊಂಡಾಗ ಮಾತ್ರ ದೇಶದ ಉತ್ತಮ ಪ್ರಜೆಗಳಾಗಲು ಸಾಧ್ಯ ಎಂದರು. ಪ್ರತಿಭಾವಂತ ಮಕ್ಕಳಿಗೆ ಹಳೆಯ ವಿದ್ಯಾರ್ಥಿಗಳಿಂದ ಬಹುಮಾನ ವಿತ–ರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾ. ಪಂ ಉಪಾಧ್ಯಕ್ಷ ಎನ್.ನಾಗರಾಜ, ಸದಸ್ಯರಾದ ಬೂದಾಳ್ ರವಿ, ವಿರುಪಾಕ್ಷಿ, ದೇವರಮನೆ ಮಲ್ಲಿಕಾರ್ಜುನ, ಒಡೆಯರ್‌ಸ್ವಾಮಿ, ವಡ್ರು ಜಡೆಪ್ಪ, ಎಸ್ ಡಿ ಎಂ ಸಿ ಅಧ್ಯಕ್ಷರಾದ ಶಿವರಾಜಕುಮಾರ ದೇವರಮನೆ, ಪಂಪಾಪತಿ, ಸದಸ್ಯರಾದ ಪೂಜಪ್ಪ, ಕರೇಗೌಡ್ರು ಮಂಜುನಾಥ, ಕೆ.ರಾಮಲಿ, ಗೊರವರ ಗಾದಿಲಿಂಗಪ್ಪ, ಪಿ.ನಾಗೇಶ್ವರಿ, ಸಹಕಾರ ಸಂಘದ ಅಧ್ಯಕ್ಷ ಸಿದ್ದಯ್ಯ, ಮುಖ್ಯಗುರು ನಂದಕಿಶೋರ್, ಮುಖಂಡರಾದ ಸಣ್ಣ ಮರೇಗೌಡ, ಸುರೇಶಗೌಡ, ಉಮೇಶಗೌಡ, ಗುಬಾಜಿ ರಾಮಾಂಜಿನಿ, ಗೌಡ್ರು ಷಣ್ಮುಕ, ಎಸ್.ಮಾರೇಶ, ಶಿವಕುಮಾರ, ಮಲ್ಲಿಕಾರ್ಜುನ, ಟಿ.ಎನ್.ರಮೇಶ, ಉಪ್ಪಾರಹಳ್ಳಿ ಸತ್ಯಣ್ಣ ಸೇರಿದಂತೆ ಪೋಷಕರು ಹಾಗೂ ಸಹ ಶಿಕ್ಷಕರು ಪಾಲ್ಗೊಂಡಿದ್ದರು.



ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16

# ಯೋಗದಲ್ಲಿ ಸಾಧನೆ ಮಾಡಿದ ಎಸ್. ಪೂಜಾ: ಅತಿ ಚಿಕ್ಕ ವಯಸ್ಸಿನಲ್ಲಿ ಸಾಧನೆಯ ಗರಿಮೆ

**ಬಳ್ಳಾರಿ / ಕಂಪ್ಲಿ:** ಮೂರ್ತಿ ಸಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತೆ ಕಲಿಕಾ ಹಂತದಲ್ಲಿ ಯೋಗಪಟು ಕಂಪ್ಲಿಯ ಎಸ್. ಪೂಜಾ ಎಂಬ ವಿದ್ಯಾರ್ಥಿನಿ ಯೋಗ ಸೇರಿದಂತೆ ನಾನಾ ರಂಗದಲ್ಲಿ ಸಾಧನೆ ಮಾಡುವ ಮೂಲಕ ಸೈ ಎನ್ನಿಸಿಕೊಂಡಿದ್ದಾಳೆ.

ಕಂಪ್ಲಿಯ 16ನೇ ವಾರ್ಡಿನಲ್ಲಿ ನೆಲೆಸಿರುವ ಎಸ್. ಶಿವಲಿಂಗಮ್ಮ ಯಮನಪ್ಪ ದಂಪತಿಯ ದ್ವಿತೀಯ ಸುಪತ್ರಿ ಪೂಜಾ ಎಂಬ ಪುಟ್ಟ ವಿದ್ಯಾರ್ಥಿನಿ ಮಕ್ಕಳಂತೆ ಇದ್ದರೂ, ಸಾಧನೆ ಮಾತ್ರ ಶಿಖರದಂತಿದೆ.

ಪ್ರತಿಭೆಗೆ ಬಡತನ ಸಾಟಿ ಇಲ್ಲ ಎಂಬಂತೆ ಮನೆಯಲ್ಲಿ ಬಡತನವಿದ್ದರೂ ಲೆಕ್ಕಿಸದೇ, ಇಚ್ಚಾಶಕ್ತಿಯೊಂದಿಗೆ ಶಾಲೆಯ ಕಲಿತಾ ಹಂತದಲ್ಲಿ ಮೊದಲ ಸ್ಥಾನದಲ್ಲಿದ್ದರೂ, ಯೋಗ ಸೇರಿದಂತೆ ಇನ್ನಿತರೆ ಕ್ಷೇತ್ರದಲ್ಲಿಯೂ ನಮ್ಮದೇ ಸ್ಥಾನ ಇರಬೇಕೆಂಬ ಹೆಬ್ಬಯಕೆಯೊಂದಿಗೆ ಸಾಧನೆಯ ಮೆಟ್ಟಿಲು ಏರುತ್ತಿದ್ದಾಳೆ.

ಕಂಪ್ಲಿ ನಿವಾಸಿಯಾದರೂ ಹೊಸಪೇಟೆಯ ಎ. ಪಿ. ಜೆ. ಅಬ್ದುಲ್ ಕಲಾಂ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಪ್ರಸಕ್ತ ವರ್ಷದಲ್ಲಿ ಏಳನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಳೆ. ಇಲ್ಲಿನ ಕಲಿಕೆಯ ಜೊತೆ ಜೊತೆಗೆ ಯೋಗದಲ್ಲಿ ತನ್ನದೇ ಛಾಪು ಮೂಡಿಸಿದ್ದಾಳೆ. ಈ ಸಾಧನೆಯೊಂದಿಗೆ ಕಂಪ್ಲಿಗೆ ಕೀರ್ತಿ ತರುವ ಜೊತೆಗೆ ಶಿಕ್ಷಣ ಮತ್ತು ಯೋಗಪಟುಗಳ ಮನ ಗೆದ್ದಿದ್ದಾಳೆ.

2022ರಲ್ಲಿ ಬಳ್ಳಾರಿ ನಗರದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ನಡೆದ ಯೋಗ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನದೊಂದಿಗೆ ಸಾಧನೆಯ ಪಟಾಕಿ ಸಿಡಿಸಿದ್ದಾಳೆ. ನಂತರ 2023ರಲ್ಲಿ ಕಲಬುರ್ಗಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟದ ಯೋಗದಲ್ಲಿ ಪ್ರಥಮ ಸ್ಥಾನದ ಸಾಧನೆ ಮಾಡಿದ್ದಾಳೆ. 2025ರ ಮೈಸೂರು ದಸರಾ (ಸಿ. ಎಂ. ಕಪ್) ಕ್ರೀಡಾಕೂಟದ ಯೋಗದಲ್ಲಿ ಅದ್ವಿತೀಯ ಸಾಧನೆಯೊಂದಿಗೆ ರಾಜ್ಯ ಮಟ್ಟದಲ್ಲಿ ಕೀರ್ತಿ ಪತಾಕಿ ಹಾರಿಸಿದ್ದಾಳೆ. ಹೀಗೆ ಹಲವು ಸಾಧನೆಗಳ ರಾಜ್ಯ ಮಟ್ಟದಲ್ಲಿ ಪಸರಿಸಿದ ಕೀರ್ತಿ ಪೂಜಾಳದ್ದಾಗಿದೆ.

**ಯೋಗ ಅಭ್ಯಾಸ ಪ್ರಾರಂಭ :** ಕಂಪ್ಲಿ ನಗರದಲ್ಲಿರುವ ಯಕ್ಷಾ ಯೋಗ ಅಕಾಡೆಮಿಯಲ್ಲಿ 2022ರ ಜೂನ್ ತಿಂಗಳಲ್ಲಿ ಯೋಗ ಅಭ್ಯಾಸಕ್ಕೆ ಸೇರಿದ್ದಾಳೆ. ಸಂಸ್ಥಾಪಕಿ ಎಂ. ಶಾಮಲಮ್ಮ ಅವರ ತರಬೇತಿ ಹಾಗೂ ಮಾರ್ಗದರ್ಶನದಲ್ಲಿ ದಿನದಿಂದ ದಿನಕ್ಕೆ ಯೋಗಭ್ಯಾಸ ಮಾಡುತ್ತಾ, ಕಿರು ವಯಸ್ಸಿನಲ್ಲಿ ಸಾಧನೆ ಮಾಡಲು ಪ್ರೇರಣೆ ಸಿಕ್ಕಂತಾಗಿದೆ. ಮೊದಲ ಹೆಜ್ಜೆಯಲ್ಲೇ ಕಂಪ್ಲಿಯಲ್ಲಿ ನಡೆದ ಹಲವು ಸ್ಪರ್ಧೆಗಳಲ್ಲಿ ಸಾಧನೆಯೊಂದಿಗೆ ಪ್ರಶಸ್ತಿಗೆ ಭಾಜನಳಾಗಿದ್ದಾಳೆ. ನಂತರದಲ್ಲಿ ಗಣಿನಾಡು ಕಣ್ಮಣಿ ಪ್ರಶಸ್ತಿ, ಸಾಧಕ ರತ್ನ ಪ್ರಶಸ್ತಿ, ಕಂಪ್ಲಿ ಕಲಾರತಿ ಪ್ರಶಸ್ತಿ, ಹೀಗೆ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡು ಸಾಧನೆಯ ಹಾದಿ ಸಾಗಿದೆ.





**ವಿವಿಧ ಕ್ಷೇತ್ರದಲ್ಲಿ ಸಾಧನೆ :** ಯೋಗ ಸಾಧನೆಯ ಜೊತೆಗೆ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಅಬಾಕಸ್‌ನಲ್ಲಿ ಚಾಂಪಿಯನ್ ಶಿಪ್ ಪ್ರಶಸ್ತಿ ಪುರಸ್ಕಾರ, ಸ್ವಾತಂತ್ರ್ಯ ಮತ್ತು ಗಣರಾಜ್ಯೋತ್ಸವ ದಿನಾಚರಣೆ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ, ಕಂಪ್ಲಿ ಕಲಾರತಿ ಉತ್ಸವದಲ್ಲಿ ಏಕಾಭಿನಯ ಪಾತ್ರಕ್ಕೆ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡ ಸಾಧಕಿ ಗಾಯತ್ರಿ ಯೋಗದಿಂದ ಅಭಿನಂದನಾ ಪ್ರಶಸ್ತಿ, ಹೀಗೆ ಹತ್ತು ಹಲವು ಸಂಘ-ಸಂಸ್ಥೆಗಳಲ್ಲಿ ನೀಡಿದ ಪ್ರಶಸ್ತಿ ಮತ್ತು ಚಿನ್ನ, ಬೆಳ್ಳಿ ಪದಕಗಳು ಪೂಜಾಳ ಆತ್ಮಸ್ಥೈರ್ಯವನ್ನು ಹೆಚ್ಚಿಸುವ ಜೊತೆಗೆ ಮತ್ತಷ್ಟು ಸಾಧನೆಗೆ ಸ್ಫೂರ್ತಿದಾಯಕವಾಗಿವೆ. ಒಟ್ಟಾರೆ ಕಿರು ವಯಸ್ಸಿನಲ್ಲಿ ಯೋಗ ಸೇರಿದಂತೆ ನಾನಾ ಸಾಧನೆಗಳ ಶಿಖರದೊಂದಿಗೆ ಪ್ರಶಸ್ತಿಗಳ ಗರಿಮೆ ತನ್ನದಾಗಿಸಿಕೊಂಡಿದ್ದು, ಮುಂದಿನ ಸಾಧನೆಗೆ ಕಂಪ್ಲಿ ಜನತೆಗೆ ಆಶಯ ದೊಡ್ಡದಾಗಿದೆ.

**" ಅತಿ ಚಿಕ್ಕ ವಯಸ್ಸಿಯಲ್ಲಿ ಹಲವು ಪ್ರಶಸ್ತಿಗಳು ಒಲಿದು ಬಂದಿವೆ. ಮತ್ತು ನಾನಾ ಕ್ಷೇತ್ರದಲ್ಲಿ ಅವಾರ್ಡ್ ಗಳು ಅರಸಿ ಬಂದಿರುವುದು ಪೂಜಾ ಯೋಗ ಸಾಧನೆಗೆ ನಿದರ್ಶನ. ಯೋಗದಲ್ಲಿ ಸಾಧನೆ ಮಾಡುವ ಪ್ರತಿಯೊಬ್ಬ-ರಿಗೂ ಸ್ಪೂರ್ತಿಯಾಗಿದ್ದು, ಇತರರಿಗೆ ಮಾದರಿಯಾಗಿದ್ದಾಳೆ. ಇಂತಹ ಮಕ್ಕಳ ಸಾಧನೆ ಗುರುತಿಸಿ, ರಾಜ್ಯ ಮಟ್ಟದ ಪ್ರಶಸ್ತಿ ನೀಡಬೇಕು ".**

**-ಎಂ.ಶಾಮಲಮ್ಮ,**
**ಸಂಸ್ಥಾಪಕಿ, ಯಕ್ಷಾ ಯೋಗ ಅಕಾಡೆಮಿ. ಕಂಪ್ಲಿ.**

**" ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸಾಧನೆ ಮಾಡುವುದು ಅಷ್ಟು ಸುಲಭವಲ್ಲ. ಇಂತದರಲ್ಲಿ ನಮ್ಮ ಮಗಳು ಪೂಜಾ, ಯೋಗದಲ್ಲಿ ಒಂದೊಂದು ಮೆಟ್ಟಲುಗಳನ್ನು ಏರಿ ರಾಜ್ಯ ಮಟ್ಟದಲ್ಲಿ ಸಾಧನೆ ಮಾಡಿರುವುದು ಹೆಮ್ಮೆಯಾಗಿದೆ. ಶಿಕ್ಷಣದ ಜೊತೆಗೆ ಯೋಗ ಸೇರಿದಂತೆ ಪ್ರತಿಯೊಂದು ರಂಗದಲ್ಲಿ ಮಕ್ಕಳು ಸಾಧನೆ ಮಾಡಿದಾಗ ಮಾತ್ರ ಮುಂದೊಂದು ದಿನದಲ್ಲಿ ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಮುನ್ನಡೆಯಲು ಎಲ್ಲಾ ರೀತಿಯಲ್ಲಿ ಸಹಕಾರ ನೀಡುತ್ತೇವೆ.**

**ಎಸ್.ಶಿವಲಿಂಗಮ್ಮ, ತಾಯಿ, ಕಂಪ್ಲಿ.**

**" ಯೋಗ ಸ್ಪರ್ಧೆಯಲ್ಲಿ ಸಾಧನೆ ಮಾಡಲು ಹಾಗೂ ಪ್ರಶಸ್ತಿ ಲಭಿಸಲು ಯಕ್ಷಾ ಯೋಗ ಅಕಾಡೆಮಿಯ ಸಂಸ್ಥಾಪಕಿ ಹಾಗೂ ಗುರುಗಳಾದ ಶಾಮಲಮ್ಮ ಹಾಗೂ ಪ್ರತಿಯೊಂದು ಹಂತದಲ್ಲಿ ಪೋಷಕರು ನೀಡಿದ ಸಹಕಾರದಿಂದ ಸಾಧನೆ ಮಾಡಲು ಸಾಧ್ಯವಾಯಿತು ".**

**ಎಸ್.ಪೂಜಾ, ಯೋಗ ಸಾಧಕಿ. ಕಂಪ್ಲಿ.**

**ವರದಿ : ಜಿಲಾನಸಾಬ್ ಬಡಿಗೇರ್**

# ಅಬುಲ್ ಕಲಾಂ ರವರ ಜೀವನ ತತ್ವ ಆದರ್ಶಗಳು ಯುವಕರಿಗೆ ಮಾದರಿಯಾಗಲಿ : ಐ. ಹೊನ್ನೂರಸಾಬ್



**ಬಳ್ಳಾರಿ / ಕಂಪ್ಲಿ :** ಡಾ. ಅಬುಲ್ ಕಲಾಂ ಅಜಾದ್ ಸಮಿತಿ ವತಿಯಿಂದ ಮೌಲಾನ ಅಬುಲ್ ಕಲಾಂ ಆಜಾದ್ ಜಯಂತಿಯನ್ನು ಹೊಸಬಸ್ ನಿಲ್ದಾಣ ಹತ್ತಿರ ಆಚರಿಸಲಾಯಿತು. ಅಧ್ಯಕ್ಷ ಐ. ಹೊನ್ನೂರಸಾಬ್ ಮಾತನಾಡಿ ಸ್ವಾತಂತ್ರ್ಯ ಹೋರಾಟಗಾರ, ರಾಷ್ಟ್ರೀಯ ನಾಯಕ, ಸ್ವತಂತ್ರ ಭಾರತದ ಪ್ರಥಮ ಶಿಕ್ಷಣ ಸಚಿವರಾಗಿದ್ದರು. ಆ ಸಂದರ್ಭದಲ್ಲಿ 1951 ರಲ್ಲಿ ಐಐಟಿ, 1953 ರಲ್ಲಿ ಯುಜಿಸಿ ಸೇರಿದಂತೆ ಹಲವಾರು ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುವ ಮೂಲಕ ಭವಿಷ್ಯ ಭಾರತದ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಿದ್ದಾರೆ. ಧರ್ಮ ಆಧಾರಿತ ದೇಶ ವಿಭಜನೆಗೆ ಅವರು ಎಂದೂ ಒಪ್ಪಿರಲಿಲ್ಲ. ಅವರು ರಾಷ್ಟ್ರೀಯವಾದಿ ಆಗಿಯೇ ಇದ್ದರು 'ಖಿಲಾಫತ್ ಚಳವಳಿಯ ನಾಯಕತ್ವ ವಹಿಸುವ ಮೂಲಕ ಗಾಂಧೀಜಿ ಅವರಿಗೆ ಹತ್ತಿರವಾಗಿದ್ದರು. ಅಲ್ಲದೆ ತಮ್ಮ 35ನೇ ವರ್ಷದಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿ ಪಕ್ಷವನ್ನು ಮುನ್ನಡೆಸಿದ್ದರು. 1942ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ನೇತೃತ್ವ ವಹಿಸಿ ಸೆರೆವಾಸ ಅನುಭವಿಸಿದ್ದರು. ಅವರ ಇತಿಹಾಸವನ್ನು ಯುವಜನರಿಗೆ ತಿಳಿಸುವ ಕೆಲಸ ಆಗಬೇಕು, ಹಾಗೆಯೇ ಆದಷ್ಟು ಶೀಘ್ರವಾಗಿ ಡಾ. ಅಬುಲ್ ಕಲಾಂ ಅಜಾದ್ ರವರ ವೃತ್ತವನ್ನು ನಿರ್ಮಾಣ ಮಾಡಬೇಕೆಂದು ವಿನಂತಿಸಿದರು.

ಶಿಕ್ಷಕ ಸೈಯದ್ ಉಮೇಸ್ ಸಾಹೇಬ್ ಖಾದ್ರಿ ಮಾತನಾಡಿ 'ನೆಹರೂ ಜನ್ಮದಿನಾಚರಣೆಯನ್ನು ಮಕ್ಕಳ ದಿನಾಚರಣೆಯನ್ನಾಗಿ, ಆಜಾದ್ ಅವರ ಜನ್ಮದಿನಾಚರಣೆಯನ್ನು ಶಿಕ್ಷಣ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು ಎಂಬ ವಿಚಾರವನ್ನು ಹೊರತುಪಡಿಸಿದಂತೆ ಆಜಾದ್ ಅವರ ಬಗ್ಗೆ ಹೆಚ್ಚಿನ ಮಾಹಿತಿಗಳು ಸಿಗುವುದಿಲ್ಲ. ಅವರ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆಯಬೇಕು, ಆಜಾದ್ ಎಂದಿಗೂ ಧಾರ್ಮಿಕ ಮತೀಯ ಭಾವನೆಗಳನ್ನು ಹೊಂದಿರಲಿಲ್ಲ. ರಾಷ್ಟ್ರೀಯ ಭಾವನೆಗಳ ಮೂಲಕ ಸಮಾಜದ ಏಕೀಕರಣಕ್ಕೆ ಮುಂದಾಗಿದ್ದರು' ಎಂದರು.

ಪಟ್ಟಣದ ಡಾ. ಅಬುಲ್ ಕಲಾಂ ಆಜಾದ್ ಶಾಲೆಯ ವಿದ್ಯಾರ್ಥಿಗಳಿಗೆ ಚಿತ್ರಕಲೆ, ಉರ್ದು, ಕನ್ನಡ ಭಾಷೆಯ ಚರ್ಚೆ, ಪ್ರಬಂಧ, ಭಾಷಣ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಉಸ್ಮಾನ್, ಅಂಜುಮನ್ ಸಂಸ್ಥೆಯ ಅಧ್ಯಕ್ಷ ಕಡಪ ಮಸ್ತಾನವಲಿ, ಪ್ರಮುಖರಾದ ಮೈಮುದಸಾಬ್, ಕೆ. ವಾಹಿದಸಾಬ್, ಬಾವಿಕಟ್ಟೆ ಬಾಬುಸಾಬ್, ಕೆ. ಮೆಹಬೂಬ್, ನವಾಬಸಾಬ್, ಬಾಳೆಕಾಯಿ ಜಾಫರ್ ಸಾಬ್, ಅಕ್ಕಿ ಜಿಲಾನ್, ಮೊಹಮ್ಮದ್ ರಫೀಕ್, ರಿಯಾಜ್ ಅಹಮದ್, ಸಮಿತಿಯ ಉಪಾಧ್ಯಕ್ಷ ಸೈಯದ್ ರಾಜಾಸಾಬ್, ಪ್ರಧಾನ ಕಾರ್ಯದರ್ಶಿ ರಾಜಭಕ್ಷಿ, ಮೆಹಬೂಬ್, ಹಸನ್, ರಿಯಾಜ್, ನಬಿ ಬೆಳಗೋಡ, ಮಾಭಾಷಾ ಸೇರಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

**ವರದಿ : ಜಿಲಾನಸಾಬ್ ಬಡಿಗೇರ್**

ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16

# ಎಪಿಡಿ ಆಲದಮರ ಸಂಸ್ಥೆ ಸಹಯೋಗ। ಮಾನಸಿಕ ಅಸ್ವಸ್ಥರ ಸ್ಥಳಾಂತರ.



**ಯಾದಗಿರಿ/ಗುರುಮಠಕಲ್:** ನ. 06 ಗುರುವಾರ. ವಿಕಲಚೇತನ ಸ್ನೇಹಿ ಸಂಸ್ಥೆಯಾದ ಎಪಿಡಿ ಹಾಗೂ ಮನೋವೃಕ್ಷ ಆಲದಮರ ಸಂಸ್ಥೆ ಸಹಯೋಗದೊಂದಿಗೆ ಪಟ್ಟಣದಲ್ಲಿನ ಇಬ್ಬರು ಮಾನಸಿಕ ಅಸ್ವಸ್ಥರನ್ನು ಆರೆಕೆಗಾಗಿ ಯಾದಗಿರಿ ವೈಜ್ಞಾನಿಕ ಸಂಸ್ಥೆಗೆ ಸ್ಥಳಾಂತರಿಸಲಾಯಿತು.

ಕಳೆದ ಹಲವು ದಿನಗಳಿಂದ ಪಟ್ಟಣದೊಳಗೆ ಅಂದಾಜು 9 ರಿಂದ 10 ಜನ ಮಾನಸಿಕ ಅಸ್ವಸ್ಥರು ಇರುವುದು ಕಂಡುಬಂದಿದ್ದು, ಅವರಿಗೆ ಸ್ಥಳೀಯವಾಗಿ ಯಾವುದೇ ಸಂಬಂಧಿಕರು ಇಲ್ಲದಿರುವುದರಿಂದ ಎಪಿಡಿ ಸಂಸ್ಥೆಯು ಮನೋವೃಕ್ಷ ಆಲದಮರ ಫೌಂಡೇಶನ್ ಅವರನ್ನು ಸಂಪರ್ಕಿಸಿ ವಿಷಯವನ್ನು ತಿಳಿಸಿತ್ತು, ಅದರಂತೆ ಎಪಿಡಿ ಮತ್ತು ಆಲದಮರ ಸಂಸ್ಥೆಗಳು ಜೊತೆಗೂಡಿ ನಡೆಸಿದ ಕಾರ್ಯಾಚರಣೆಯಲ್ಲಿ ಇಬ್ಬರು ಅಸ್ವಸ್ಥರನ್ನು ಜಿಲ್ಲಾಸ್ಪತ್ರೆಯ ಮಾನಸಿಕ ಚಿಕತ್ಸ ವಿಭಾಗಕ್ಕೆ ಆರೆಕೆಗಾಗಿ ಯಾದಗಿರಿ ವೈಜ್ಞಾನಿಕ ಸಂಸ್ಥೆಗೆ ಸ್ಥಳಾಂತರಿಸಲಾಯಿತು.

ಮಾನಸಿಕ ಅಸ್ವಸ್ಥರಾದ ಹನುಮಂತ ಮತ್ತು ಸತ್ಯನಾರಾಯಣ ಎನ್ನಲಾದವರನ್ನು ಆಲದಮರ ಫೌಂಡೇಶನ್ ಮತ್ತು ಜಿಲ್ಲಾಸ್ಪತ್ರೆಯ ಮಾನಸಿಕ ಚಿಕಿತ್ಸಾ ವಿಭಾಗದ ಸಹಯೋಗದಲ್ಲಿ ಹೆಚ್ಚುವರಿ ವೈದ್ಯಕೀಯ ಚಿಕಿತ್ಸೆ ನೀಡಿ, ಅವಶ್ಯಕ ಸಹಾಯ ನೀಡುವ ಮೂಲಕ ಮತ್ತೆ ಮುಖ್ಯ ವಾಹಿನಿಗೆ ತರುವ ಕಾರ್ಯ ಮಾಡಲಾಗುವುದು ಎಂದು ಆಲದಮರ ಫೌಂಡೇಶನ್ ಜಿಲ್ಲಾ ಸಂಯೋಜಕರಾದ ಶೇಖರ್ ಕಟ್ಟಿಮನಿ ತಿಳಿಸಿದರು.

ಇಂದಿನ ಕಾರ್ಯಾಚರಣೆಯಲ್ಲಿ ಎ ಪಿ ಡಿ ಸಂಸ್ಥೆಯ ತಾಲೂಕು ಸಂಯೋಜಕರಾದ ವಿರೂಪಾಕ್ಷ ಮಾಲಿಪಾಟೀಲ್, ವಿಕಲ ಚೇತನ ಸಹಾಯಕ ಗಂಗಪ್ಪ ಯಾದವ್, ಆರೋಗ್ಯ ಸಮುದಾಯ ಕೇಂದ್ರದ ವೈದ್ಯಾಧಿಕಾರಿ ಡಾ.ಮಹೇಶ್ ಸಜ್ಜನ್, 108 ಆಂಬುಲೆನ್ಸ್ ಸಿಬ್ಬಂದಿಯಾದ ಪವನ್ ಕುಮಾರ್ ಚಂದಾಪುರ್ ಹಾಗೂ ಶ್ರೀನಿವಾಸ್ ಇಎಂಟಿ ಸೇ–ರಿದಂತೆ ಗುರುಮಠಕಲ್ ಪೊಲೀಸ್ ಠಾಣೆಯ ಸಿಬ್ಬಂದಿ ಹಾಗೂ ವೈದ್ಯಕೀಯ ಸಿಬ್ಬಂದಿ ಭಾಗಿಯಾದರು.

**ವರದಿ: ಜಗದೀಶ್ ಕುಮಾರ್ ಭೂಮಾ**

# ಬೋಡಬಂಡಾ ರಥೋತ್ಸವ ಸಂಪನ್ನ



**ಯಾದಗಿರಿ/ ಗುರುಮಠಕಲ್ :** ತಾಲೂಕಿನ ಬೋಡಬಂಡಾ ಗ್ರಾಮದಲ್ಲಿ ಇತ್ತೀಚೆಗೆ ಶ್ರೀಲಕ್ಷ್ಮೀ ತಿಮ್ಮಪ್ಪ ದೇವರ ರಥೋತ್ಸವ ಸಂಪನ್ನಗೊಂಡಿತು.

ಬೆಳಿಗ್ಗೆಯಿಂದ ಸುಪ್ರಭಾತ ಸೇವೆ, ಪಂಚಾಮೃತ ಅಭಿಷೇಕ, ಹೋಮ, ಅಭ್ಯಂಗ ಸ್ನಾನ, ಕಲ್ಯಾಣೋತ್ಸವ ಹಾಗೂ ರಥೋತ್ಸವ, ಉಂಜಲ ಸೇವೆ ಸಾಂಪ್ರದಾಯಿಕವಾಗಿ ಮಧ್ಯಾಹ್ನದವರೆಗೆ ಜರುಗಿದವು.

ಸಾಯಂಕಾಲದ ಕೈ ಕುಸ್ತಿ ಪಂದ್ಯಗಳು ಜರುಗಿದವು, ಕೈ ಕುಸ್ತಿ ಪಂದ್ಯದಲ್ಲಿ ನೆರೆಯ ತೆಲಂಗಾಣ ರಾಜ್ಯ ಸೇರಿದಂತೆ ಸುತ್ತಮುತ್ತಲಿನ ಪಟುಗಳು ಪಾಲ್ಗೊಂಡರು, ಅಸಂಖ್ಯಾತ ಭಕ್ತರನ್ನು ಹೊಂದಿರುವ ಬೋಡಬಂಡಾ ಸುಕ್ಷೇತ್ರಕ್ಕೆ ಬೆಳಿಗ್ಗೆಯಿಂದ ನೂರಾರು ಭಕ್ತರು ಕಾರ್ಯಕ್ರಮಗಳ ದರ್ಶನ ಪಡೆದು ಪುನೀತರಾದರು. ಕೈ ಕುಸ್ತಿ ಪಂದ್ಯಗಳ ಮುಕ್ತಾಯದೊಂದಿಗೆ 16ನೇಯ ಜಾತ್ರಾ ಮಹೋತ್ಸವ ಸಂಪನ್ನಗೊಂಡಿತು.

ಕಾರ್ಯಕ್ರಮದಲ್ಲಿ ಖಾಸಾಮಠದ ಶ್ರೀಗಳು ಸೇರಿದಂತೆ ವಿವಿಧ ಮಠದ ಶ್ರೀಗಳು ಭಾಗವಹಿಸಿದರು, ದೇವಸ್ಥಾನ ಜೀರ್ಣೋದ್ಧಾರ ಸಮಿತಿಯ ಮಣಿಕಂಠ ರಾಥೋಡ್, ಅಯ್ಯಪ್ಪ ರಾಥೋಡ್ ಹಾಗೂ ರಾಜು ರಾಥೋಡ್ ದೇವಸ್ಥಾನದ ಸದ್ಭಕ್ತರು ಭಾಗವಾಹಿಸಿದ್ದರು.

**ವರದಿ: ಜಗದೀಶ್ ಕುಮಾರ್ ಭೂಮಾ.**

# ಮಕ್ಕಳಿಗೆ ನಿಸ್ವಾರ್ಥದಿಂದ ಸೇವೆ ಮಾಡಿದರೆ ಒಳ್ಳೆಯದಾಗುತ್ತದೆ : ಶ್ರೀಶೈಲ್ ಯಡಳ್ಳಿ



ಬೆಳಗಾವಿ ಜಿಲ್ಲೆ ಬೈಲಹೊಂಗಲ ಪಟ್ಟಣದ ಪುರಸಭೆ ಸಂಚಾಲಿತ ಶೂರ ಸಂಗೊಳ್ಳಿ ರಾಯಣ್ಣ ಪ್ರೌಢಶಾಲೆ ಮಕ್ಕಳಿಗೆ ಉಚಿತವಾಗಿ ಒಂದು ಲಕ್ಷ ರೂಪಾಯಿ ಮೌಲ್ಯದ ನೋಟ್ ಬುಕ್ಕುಗಳನ್ನು ಪಿ ಎಲ್ ಡಿ ಬ್ಯಾಂಕ್ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು, ರಾಜಕೀಯ ರಂಗದಲ್ಲಿ ಗುರುತಿಸಿಕೊಂಡ ಧೀಮಂತ ಸಮಾಜ ಸೇವಕರಾದ ಶ್ರೀ ಶ್ರೀಶೈಲ ಯಡಳ್ಳಿಯವರು ವಿತ–ರಿಸಿದರು. ನಂತರ ಮಾತನಾಡಿದ ಅವರು ಈಗಿನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು ಹಾಗೂ ನಾನು ಕಲಿತ ಈ ಶಾಲೆಗೆ ಕೊಡುಗೆ ನೀಡಬೇಕೆಂಬ ಉದ್ದೇಶದಿಂದ ಈಗಿನ ಶಾಲಾ ಮಕ್ಕಳಿಗೆ ನೋಟ್ ಬುಕ್ ವಿತರಿಸಿದ್ದೇನೆ ಮತ್ತು ಈ ವರ್ಷದ ಎಸ್ ಎಸ್ ಎಲ್ ಸಿ ಫಲಿತಾಂಶದಲ್ಲೂ ಕೂಡ ನಮ್ಮ ತಾಲೂಕು ಪ್ರಥಮ ಸ್ಥಾನ ಪಡೆದಿದೆ ಆದ್ದರಿಂದ ಶಿಕ್ಷಕರು ಹಾಗೂ ಪೋಷಕರು ಸಹ ಮಕ್ಕಳ ಶಿಕ್ಷಣದಲ್ಲಿ ಹೆಚ್ಚಿನ ಪ್ರಾಮುಖ್ಯತೆ ವಹಿಸಬೇಕು, ಇಲ್ಲಿನ ಶಿಕ್ಷಕರು ನಿಸ್ವಾರ್ಥದಿಂದ ಸೇವೆ ಸಲ್ಲಿಸುತ್ತಿರುವುದು ನಾಡಿನೆಲ್ಲೆಡೆ ಪ್ರಶಂಸೆಗೆ ಪಾತ್ರವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಶಿಕ್ಷಕರಾದ ಶ್ರೀ ಬಾಳೇಶ ಭೋರಗಲ್ ಮಾತನಾಡಿ ಸಮಾಜಕ್ಕೆ ಸದಾಕಾಲ ಮಿಡಿಯುವ ಹೃದಯವಂತಿಕೆಯ ಕುಟುಂಬ ಶ್ರೀಶೈಲ ಯಡಳ್ಳಿ ಅವರದ್ದಾಗಿದೆ, ಹಿರಿಯರು ಹಾಕಿಕೊಟ್ಟ ಮಾರ್ಗವನ್ನು ಅವರು ಅನುಸರಿಸುತ್ತಿರುವುದು ಶ್ಲಾಘನೀಯ ಎಂದರು. ಶ್ರೀಶೈಲ್ ಯಡಳ್ಳಿ ,ರೂಪಾ ಯಡಳ್ಳಿ ದಂಪತಿಗಳನ್ನು ಹಾಗೂ ರಾಜ್ಯಮಟ್ಟದ ಅಬ್ಯಾಕಸ್ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಆರಾಧ್ಯಾ ಯಡಳ್ಳಿ ಅವರನ್ನು ಶಾಲೆಯ ವತಿಯಿಂದ ಸತ್ಕರಿಸಲಾಯಿತು.

ಅತಿಥಿಗಳಾಗಿ ದಂತ ವೈದ್ಯವಿದ್ಯಾರ್ಥಿ ಬಸವರಾಜ ಯಡಳ್ಳಿ, ಸಕಲೇಶ ಯಡಳ್ಳಿ ಆಗಮಿಸಿದ್ದರು. ಶಿಕ್ಷಕಿಯರಾದ ಗೀತಾ ಸೋಲಬನ್ನವರ, ಲಕ್ಷ್ಮಿ ಬಡ್ಲಿ ಹಾಗೂ ಮಂಜು ಗರಗದ, ವಿಜಯಾ ಹಸರಂಗಿ, ಈರಣ್ಣ ದೀವಾನದ, ಈಶ್ವರ ಮದನಬಾವಿ, ಅದೃಶ್ಯ ಕುರಬೇಟ್, ರುಬಿನಾ ಮಲ್ಲನವರ, ಇಪ್ರಾ ಮುಲ್ಲಾ, ಪ್ರಭು ಹೊಸೂರು, ಬಸವ ಪ್ರಭು ಮೇಳವಂಕಿ, ಸೈಯದ ಶಿವಾನಂದ ಶಿರವಂಶಿ ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ವರದಿ ಮಂಜು .ಎಂ. ಚಿಕ್ಕಣ್ಣವರ**



ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16

# ಮುಸ್ಟೂರು :72ನೇ ಅಖಿಲ ಭಾರತ ಸಹಕಾರ ಸಪ್ತಾಹ



ಕೊಪ್ಪಳ : ಕಾರಟಗಿ ತಾಲೂಕಿನ ಮೂಸ್ಟೂರ ಪ್ರಾಥ-ಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹ –2025 ಪ್ರಯುಕ್ತ ಪ್ರಾಥ-ಮಿಕ ಕೃಷಿ ಪತ್ತಿನ ಸಹಕಾರ ಸಂಘ ಮುಸ್ಟೂರು ಸಂಘದ ಆವರಣದಲ್ಲಿ ಧ್ವಜಾರೋಹಣ ಮಾಡಲಾಯಿತು.

ಈ ಸಂದರ್ಭದಲ್ಲಿ ಸಹಕಾರ ಪಿತಾಮಹ ಕಣಿಗನಾಳ ಸಿದ್ದನಗೌಡ ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಸಹಕಾರ ಸಪ್ತಾಹ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಯರ್ರಿಸ್ವಾಮಿ ಕುಂಟೋಜಿ ಹಾಗೂ ಉಪಾಧ್ಯಕ್ಷರಾದ ತಾಜುದ್ದೀನ್ ಸಾಬ್ ಮುಸ್ಟೂರು, ಸಂಘದ ಕಾರ್ಯದರ್ಶಿಗಳಾದ ಶರಣಪ್ಪ ಕಂಪ್ಲಿ ಹಾಗೂ ಪಿ.ರಾಘವೇಂದ್ರ ಢಣಾಪುರ , ಸಂಘದ ಆಡಳಿತ ಮಂಡಳಿ, ಸದಸ್ಯರು ,ಸಂಘದ ಸಿಬ್ಬಂದಿ ಹಾಗೂ ಊರಿನ ಗುರು ಹಿರಿಯರು ಭಾಗಿಯಾಗಿದ್ದರು.

**ವರದಿ ಹನುಮೇಶ ಭಾವಿಕಟ್ಟಿ**


# ಅನುದಾನ ಸದುಪಯೋಗ ಕುರಿತು ಮನವಿ ಪತ್ರ ಸಲ್ಲಿಕೆ




ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಸಂಜೀವ ಜುನ್ನೂರ ಅವ-ರಿಗೆ ಅಂಬೇಡ್ಕರ ಯುವ ಸೇನೆ ರಾಜ್ಯಾಧ್ಯಕ್ಷರಾದ ಶ್ರೀ ಮಂಜು ಎಂ. ಚಿಕ್ಕಣ್ಣವರ ಅವರು ಮನವಿ ಪತ್ರ ನೀಡಿ ಬೈಲಹೊಂಗಲ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಎಸ್ ಸಿ, ಎಸ್ ಟಿ ಜನರಿಗೆ ಮೀಸಲಿಟ್ಟ ಅನುದಾನ ಬಳಕೆ ಆಗದ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ,ಅನುದಾನ ಬಳಕೆಯಾದ ಗ್ರಾಮ ಪಂಚಾಯಿತಿಗಳಲ್ಲಿ ಜಿಎಸ್‌ಟಿ ನಂಬರ್ ಇಲ್ಲದ ಬಿಲ್ ರಶೀದಿಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಹಾಗೂ ಸರಕಾರ ಸುತ್ತೋಲೆ ಅನ್ವಯ ಎಸ್ ಸಿ, ಎಸ್ ಟಿ ಜನರಿಗೆ ನೀಡಬೇಕಾದ ಕಾಮಗಾರಿಗಳ ಬಗ್ಗೆ ಸಹ ಅನ್ಯಾಯವಾಗಿದೆ ಎಂದು ವಿಷಯ ವ್ಯಕ್ತಪಡಿಸಿದರು.

**ವರದಿ ಮಂಜು .ಎಂ .ಚಿಕ್ಕಣ್ಣವರ**

# ಶ್ರೀ ಆದ್ಯ ದ್ವೈಪನಾಚಾರ್ಯ ಪುಣ್ಯಾರಾಧನೆ ಕಾರ್ಯಕ್ರಮ



ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಅಗರಖೇಡ ಗ್ರಾಮದಲ್ಲಿ ದಿನಾಂಕ: 09/11/2025 ರ ರವಿವಾರ ದಿನದಂದು ಆದ್ಯ ದ್ವೈಪನಾಚಾರ್ಯರ ಪುಣ್ಯ ದಿನದ ನಿಮಿತ್ಯವಾಗಿ ಶ್ರೀರಾಮ ಮಂದಿರದಲ್ಲಿ ರಾಮ, ಸೀತೆ, ಲಕ್ಷ್ಮಣ ಮೂರ್ತಿಯ ಜೊತೆಗೆ ಆದ್ಯ ದ್ವೈಪನಾಚಾರ್ಯ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಅಗರಖೇಡ ಗ್ರಾಮದ ಪ್ರಮುಖರೆಲ್ಲಾ ಸೇ-ರಿಕೊಂಡು ಅಭಿಷೇಕ, ಪೂಜೆ, ಪುಣ್ಯಾರಾಧನೆಯನ್ನು ಮಾಡಿದರು.

ಶ್ರೀ ಆದ್ಯ ದ್ವೈಪನಾಚಾರ್ಯರು ತಮಿಳುನಾಡಿನ ಕುಂಭಕೋ-ಣಂ ಗ್ರಾಮದಲ್ಲಿ ಜನಿಸಿದರು. ಅಲ್ಲಿ ವಿದ್ಯಾರ್ಜನೆಯನ್ನು ಮಾಡಿ ಮುಂದೆ ಬನಾರಸದಲ್ಲಿ ಸಂಸ್ಕೃತ ವಿದ್ಯೆಯನ್ನು ಕಲಿತು ಅದೇ ಬನಾರಸ್ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಉಪನ್ಯಾಸಕರಾಗಿ ಸೇವೆಯನ್ನು ಸಲ್ಲಿಸಿದರು.


ಒಂದು ದಿನ ಶ್ರೀ ದ್ವೈಪನಾಚಾರ್ಯರು ಪಂಡರಾಪುರ ವಿಠ್ಠಲ ದೇವರ ದರ್ಶನ ಪಡೆಯಬೇಕೆಂದು ಇಚ್ಚಿತರಾಗಿ ಭಕ್ತರೊಂದಿಗೆ ಪಂಡರಾಪುರಕ್ಕೆ ಪ್ರಯಾಣ ಬೆಳೆಸಿದರು.

ಪ್ರಯಾಣದ ಸಂದರ್ಭದಲ್ಲಿ ಇಂಡಿ ತಾಲೂಕ ಅಗರಖೇಡ ಗ್ರಾಮದಲ್ಲಿ ರಾತ್ರಿ ವಾಸ್ತವ್ಯ ಮಾಡಿದಾಗ ರಾತ್ರಿ ಕನಸಿನಲ್ಲಿ ಪಂಡರಾಪುರ ವಿಠ್ಠಲ ದೇವರು ದರ್ಶನ ಕೊಟ್ಟು ಪಂಡರಾಪುರಕ್ಕೆ ಬರುವುದಕ್ಕಿಂತಲೂ ಇದೇ ಅಗರಖೇಡ ಗ್ರಾಮದಲ್ಲಿ ನೀನು ವಾಸ ಮಾಡಿ ಪವಾಡಗಳನ್ನು ಮಾಡುತ್ತಾ ಭಕ್ತರನ್ನು ಉದ್ದರಿಸು ಎಂದು ಆಶೀರ್ವಾದ ಮಾಡಿ ಎಂದು ಹೇಳಿದರಂತೆ ಅದಕ್ಕಾಗಿ ಅವರು ಅಗರಖೇಡ ಗ್ರಾಮದಲ್ಲಿ ತಮ್ಮ ಬಿಡಾರವನ್ನು ಹೂಡಿ ಖಾಯಂ ಇಲ್ಲಿಯೇ ವಾಸಿಗಳಾದರು.

ಮುಂದೆ ಅವರು ಮಾಡಿದ ಅನೇಕ ಪವಾಡಗಳನ್ನು ಮಾಜಿ ತಾಲೂಕಾ ಪಂಚಾಯತಿ ಸದಸ್ಯರಾದ ಮಲ್ಲಣ್ಣ ತೋಳನೂರ್ ಹಾಗೂ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ನೀಲಕಂಠ ಸಾವಳಗಿ ಅವರು ಮಾತನಾಡಿ ತಮ್ಮ ವಿಚಾರಧಾರೆಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಪರಮಾನಂದ ಮಾಶಾಳ, ಶಂಕರಲಿಂಗ ಬಿರಾದಾರ್, ದರಪ್ಪ ಸಾವಳಗಿ, ಯಲ್ಲಪ್ಪ ತಾಂಬೆ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

**ವರದಿ ಮನೋಜ್ ನಿಂಬಾಳ**



ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16

# ವಿದ್ಯಾರ್ಥಿ ಜೀವನದಲ್ಲಿ ಮಾನಸಿಕ ಆರೋಗ್ಯದ ಪ್ರಾಮುಖ್ಯತೆ



ಮಾನಸಿಕ ಆರೋಗ್ಯವು ಒಟ್ಟಾರೆ ಯೋಗಕ್ಷೇಮದ ನಿರ್ಣಾಯಕ ಅಂಶವಾಗಿದೆ ಮತ್ತು ಇದು ವಿದ್ಯಾರ್ಥಿಗಳಿಗೆ ವಿಶೇಷವಾಗಿ ಮುಖ್ಯವಾಗಿದೆ. ಶೈಕ್ಷಣಿಕ ಜೀವನದ ಒತ್ತಡಗಳು. ಸಾಮಾಜಿಕ ನಿರೀಕ್ಷೆಗಳು ಮತ್ತು ಪ್ರೌಢಾವಸ್ಥೆಗೆ ಪರಿವರ್ತನೆಯ ಸವಾಲುಗಳು ಮಾನಸಿಕ ಆರೋಗ್ಯದ ಮೇಲೆ ಗಮನಾರ್ಹ ಪರಿಣಾಮ ಬೀರಬಹುದು. ಮಾನಸಿಕ ಆರೋಗ್ಯ ಸಮಸ್ಯೆಗಳೊಂದಿಗೆ ಹೋರಾಡುವ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಯಶಸ್ವಿಯಾಗಲು ಕಷ್ಟವಾಗಬಹುದು ಮತ್ತು ಸಂಬಂಧಗಳೊಂದಿಗೆ ಹೋರಾಡಬಹುದು. ಇದು ಅವರ ಜೀವನದಲ್ಲಿ ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವುದು. ಅತ್ಯಗತ್ಯವಾಗಿದೆ. ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯ ಶಿಕ್ಷಣದ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಮಾನಸಿಕ ಆರೋಗ್ಯ ಶಿಕ್ಷಣ ಎಂದರೆ ವ್ಯಕ್ತಿಯ ಭಾವನಾತ್ಮಕ ಸಾಮಾಜಿಕ ಮತ್ತು ಮಾನಸಿಕ ಯೋಗಕ್ಷೇಮದ ತಿಳುವಳಿಕೆ. ಇದರ ಜೊತೆಗೆ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದ ಸಂಬಂಧಿತ ಮಾಹಿತಿ ಅಥವಾ ಜ್ಞಾನವನ್ನು ನೀಡುವುದು. ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯ ಶಿಕ್ಷಣವು ಶೈಕ್ಷಣಿಕ ಶಿಕ್ಷಣದಷ್ಟೇ ಮುಖ್ಯವಾಗಿದೆ. ಮಗು ಮಾನಸಿಕವಾಗಿ ಚೆನ್ನಾಗಿದ್ದರೆ ಅವನು/ಅವಳು ತನ್ನ ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಬಹುದು. ವಿದ್ಯಾರ್ಥಿಗಳ ಜೀವನದಲ್ಲಿ ಮಾನಸಿಕ ಆರೋಗ್ಯ ಶಿಕ್ಷಣದ ಪ್ರಮುಖ ಅನುಕೂಲಗಳು.. ಶೈಕ್ಷಣಿಕ ಉತ್ಕೃಷ್ಟತೆಯನ್ನು ಸುಧಾರಿಸುವುದು.ವಿದ್ಯಾರ್ಥಿಯು ಮಾನಸಿಕವಾಗಿ ಸದೃಢನಾಗಿದ್ದರೆ ಮತ್ತು ಉತ್ತಮವಾಗಿದ್ದರೆ. ಅವನು/ಅವಳು ತಮ್ಮ ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಬಹುದು. ಮಾನಸಿಕ ಆರೋಗ್ಯ ಶಿಕ್ಷಣವು ವಿದ್ಯಾರ್ಥಿಗಳ ಶೈಕ್ಷಣಿಕ ಉತ್ಕೃಷ್ಟತೆ ಮತ್ತು ಮಾನಸಿಕ ಯೋಗಕ್ಷೇಮದ ಮೇಲೆ ಗಮನಾರ್ಹ ಸಕಾರಾತ್ಮಕ ಪರಿಣಾಮ ಬೀರುತ್ತದೆ. ಸಾಮಾಜಿಕ ಕೌಶಲ್ಯಗಳನ್ನು ಹೆಚ್ಚಿಸುವುದು. ಮಾನಸಿಕ ಆರೋಗ್ಯ ಶಿಕ್ಷಣವು ವಿದ್ಯಾರ್ಥಿಗಳು ತಮ್ಮ ಸಾಮಾಜಿಕ ಕೌಶಲ್ಯಗಳನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಇದು ವಿಭಿನ್ನ ಜನರೊಂದಿಗೆ ಬೆರೆಯಲು ಮತ್ತು ಅವರಿಂದ ಅನೇಕ ವಿಷಯಗಳನ್ನು ಕಲಿಯಲು ಬಹಳ ಮುಖ್ಯವಾಗಿದೆ. ಸಾಮಾಜಿಕ ಕೌಶಲ್ಯಗಳನ್ನು ಕಲಿಯುವುದು ಇತರರೊಂದಿಗೆ ಗೌರವಯುತ ಮತ್ತು ಪರಸ್ಪರ ಸಂಪರ್ಕಗಳನ್ನು ಬೆಳೆಸಲು ಸಹ ನಿಮಗೆ ಸಹಾಯ ಮಾಡುತ್ತದೆ.

ನಿರ್ಧಾರ ತೆಗೆದುಕೊಳ್ಳುವ ಕೌಶಲ್ಯಗಳು. ಮಾನಸಿಕ ಆರೋಗ್ಯ ಶಿಕ್ಷಣವು ವಿದ್ಯಾರ್ಥಿಗಳ ಜೀವನದಲ್ಲಿ ಬಹಳ ಮುಖ್ಯ ಏಕೆಂದರೆ ಇದು ಸಂಬಂಧಿತ ಜ್ಞಾನ. ಸ್ವಯಂ ಅರಿವು. ಮನಸ್ಸಿನ ಸ್ಪಷ್ಟತೆ. ವಿಶ್ಲೇಷಣಾತ್ಮಕ ಚಿಂತನೆ ಇತ್ಯಾದಿಗಳನ್ನು ನೀಡುವ ಮೂಲಕ ವಿದ್ಯಾರ್ಥಿಗಳ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯಗಳನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ. ಪ್ರತಿಯೊಬ್ಬರ ಜೀವನದಲ್ಲಿ ನಿರ್ಧಾರ ತೆಗೆದುಕೊಳ್ಳುವ ಕೌಶಲ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ನಮಗೆಲ್ಲರಿಗೂ ತಿಳಿದಿದೆ. ಒಬ್ಬರು ತಮಗೆ ಯಾವುದು ಉತ್ತಮ ಎಂದು ತಿಳಿದುಕೊಳ್ಳಬೇಕು ಮತ್ತು.ಬುದ್ಧಿವಂತಿಕೆಯಿಂದ ವಿಷಯಗಳನ್ನು ನಿರ್ಧರಿಸಬೇಕು.ಭಾವನಾತ್ಮಕ ನಿಯಂತ್ರಣ. ಭಾವನೆಗಳನ್ನು ನಿರ್ವಹಿಸುವುದು ಮತ್ತು ವ್ಯಕ್ತಪಡಿಸುವುದು ಪ್ರತಿಯೊಬ್ಬರ ಜೀವನದಲ್ಲಿ ಬಹಳ ಮುಖ್ಯ. ಮಾನಸಿಕ ಆರೋಗ್ಯ ಶಿಕ್ಷಣವು ವಿದ್ಯಾರ್ಥಿಗಳು ಭಾವನಾತ್ಮಕ ನಿಯಂತ್ರಣ ಕೌಶಲ್ಯಗಳನ್ನು ಕಲಿಯಲು ಮತ್ತು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಇದು ವಿದ್ಯಾರ್ಥಿಗಳು ತಮ್ಮ ಭಾವನೆಗಳು ಮತ್ತು ಭಾವನೆಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ. ಜೊತೆಗೆ ಕಷ್ಟಕರವಾದ ಭಾವನೆಗಳನ್ನು ಹೇಗೆ ಎದುರಿಸಬೇಕೆಂದು ಅವರು ಕಲಿಯುತ್ತಾರೆ. ಸ್ವಯಂ ಜಾಗೃತಿಯನ್ನು ಉತ್ತೇಜಿಸುವುದು. ಮಾನಸಿಕ ಆರೋಗ್ಯ ಶಿಕ್ಷಣವು ವಿದ್ಯಾರ್ಥಿಗಳ ಜೀವನದಲ್ಲಿ ಸ್ವಯಂ ಅರಿವನ್ನು ಉತ್ತೇಜಿಸುವ ಮೂಲಕ ಪ್ರಮುಖ ಪಾತ್ರ ವಹಿಸುತ್ತದೆ. ಆ ಅರಿವು ವಿದ್ಯಾರ್ಥಿಗಳಿಗೆ ಕಷ್ಟಕರ ಸಂದರ್ಭಗಳನ್ನು ನಿಭಾಯಿಸಲು ಅಥವಾ ಅವುಗಳನ್ನು ನಿಭಾಯಿಸಲು ಪರಿಣಾಮಕಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

ಆರೋಗ್ಯಕರ ಸಂಬಂಧಗಳನ್ನು ನಿರ್ಮಿಸುವುದು. ಮಾನಸಿಕ ಆರೋಗ್ಯ ಶಿಕ್ಷಣವನ್ನು ಕಲಿಯುವುದರಿಂದ ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಸಂಬಂಧಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು ಉತ್ತೇಜಿಸುತ್ತದೆ. ಮಾನಸಿಕವಾಗಿ ಯೋಗಕ್ಷೇಮ ಹೊಂದಿರುವ ವಿದ್ಯಾರ್ಥಿಗಳು ಅನೇಕ ಸಂಪರ್ಕಗಳನ್ನು ಸುಲಭವಾಗಿ ಮಾಡಿಕೊಳ್ಳುತ್ತಾರೆ. ಒತ್ತಡ ಕಡಿಮೆ ಮಾಡುವುದು. ಮಾನಸಿಕ ಆರೋಗ್ಯ ಶಿಕ್ಷಣವನ್ನು ಅರ್ಥಮಾಡಿಕೊಳ್ಳುವುದು ವಿದ್ಯಾರ್ಥಿಗಳು ತಮ್ಮ ಒತ್ತಡದ ಮಟ್ಟವನ್ನು ಪರಿಣಾಮಕಾರಿಯಾಗಿ ಕಡಿಮೆ ಮಾಡಲು ಮತ್ತು ಕೆಲವು ನಿಭಾಯಿಸುವ ತಂತ್ರಗಳು ಮತ್ತು ಮೈಂಡ್‌ಫುಲ್‌ನೆಸ್ ತಂತ್ರಗಳನ್ನು ಕಲಿಯಲು ಪ್ರೋತ್ಸಾಹಿಸುತ್ತದೆ.ಸ್ವಾಭಿಮಾನವನ್ನು ಸುಧಾರಿಸುವುದು. ಮಾನಸಿಕ ಆರೋಗ್ಯ ಶಿಕ್ಷಣವು ವಿದ್ಯಾರ್ಥಿಗಳು ಸವಾಲುಗಳು ಮತ್ತು ಕಷ್ಟಕರ ಸಂದರ್ಭಗಳನ್ನು ನಿಭಾಯಿಸುವ ಸಾಮರ್ಥ್ಯದಲ್ಲಿ ವಿಶ್ವಾಸವನ್ನು ಗಳಿಸುವುದರಿಂದ ಸ್ವಾಭಿಮಾನವನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಆತಂಕವನ್ನು ಕಡಿಮೆ ಮಾಡುವುದು. ಮಾನಸಿಕ ಆರೋಗ್ಯ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಸ್ವಯಂ ಅರಿವು. ಭಾವನಾತ್ಮಕ ನಿಯಂತ್ರಣ ಕೌಶಲ್ಯಗಳನ್ನು ನೀಡುವುದು, ಹೊಸ ಸ್ನೇಹಿತರು ಅಥವಾ ಸಂಪರ್ಕಗಳನ್ನು ಮಾಡಿಕೊಳ್ಳುವುದು. ಬೆಂಬಲ ನೀಡುವ ವಾತಾವರಣವನ್ನು ಸೃಷ್ಟಿಸುವುದು ಇತ್ಯಾದಿಗಳ ಮೂಲಕ ಆತಂಕ ಮತ್ತು ಖಿನ್ನತೆಯನ್ನು ಕಡಿಮೆ ಮಾಡುತ್ತದೆ.

ಶಾಲೆಯಲ್ಲಿ ಮಾನಸಿಕ ಆರೋಗ್ಯ ಶಿಕ್ಷಣದ ಮಹತ್ವ ಮಾನಸಿಕ ಯೋಗಕ್ಷೇಮವನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಂಬಂಧಿತ ಜ್ಞಾನ ಮತ್ತು ಮಾಹಿತಿಯನ್ನು ಒದಗಿಸುವುದರಿಂದ ಶಾಲೆಗಳಲ್ಲಿ ಮಾನಸಿಕ ಆರೋಗ್ಯ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ.ಶಾಲಾ ಪಠ್ಯಕ್ರಮದಲ್ಲಿ ಮಾನಸಿಕ ಆರೋಗ್ಯ ಶಿಕ್ಷಣವನ್ನು ಸೇರಿಸುವುದರಿಂದ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಮತ್ತು ವೃತ್ತಿಪರವಾಗಿ ಅತ್ಯುತ್ತಮ ಪ್ರದರ್ಶನ ನೀಡಲು ಸಮಗ್ರ ವಿಧಾನವನ್ನು ಪಡೆಯಲು ಸಹಾಯ ಮಾಡುತ್ತದೆ. ಪೋಷಕರು ತಮ್ಮ ಮಗುವನ್ನು ಯಾವುದೇ ಶಾಲೆಗೆ ಸೇರಿಸುವ ಮೊದಲು ಮಾನಸಿಕ ಆರೋಗ್ಯ ಶಿಕ್ಷಣಕ್ಕೆ ಆದ್ಯತೆ ನೀಡುವ ಮತ್ತು ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಮತ್ತು ಭಾವನಾತ್ಮಕವಾಗಿ ಪೋಷಿಸುವ ಶಾಲೆಗಳನ್ನು ಹುಡುಕಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ ಶೈಕ್ಷಣಿಕ ಜೀವನದ ಒತ್ತಡಗಳು ಸಾಮಾಜಿಕ ನಿರೀಕ್ಷೆಗಳು ಮತ್ತು ಪ್ರೌಢಾವಸ್ಥೆಗೆ ಪರಿವರ್ತನೆಯು ಮಾನಸಿಕ ಆರೋಗ್ಯದ ಮೇಲೆ ಗಮನಾರ್ಹ ಪರಿಣಾಮ ಬೀರಬಹುದು. ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡಲು ವಿದ್ಯಾರ್ಥಿಗಳು ವಿರಾಮಗಳನ್ನು ತೆಗೆದುಕೊಳ್ಳಬಹುದು. ಸಾಕಷ್ಟು ನಿದ್ರೆ ಮಾಡಬಹುದು.ನಿಯಮಿತವಾಗಿ ವ್ಯಾಯಾಮ ಮಾಡಬಹುದು.ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವ ಮೂಲಕ ವಿದ್ಯಾರ್ಥಿಗಳು ಶೈಕ್ಷಣಿಕ ಕಾರ್ಯಕ್ಷಮತೆಯನ್ನು ಸುಧಾರಿಸಬಹುದು.ಉತ್ತಮ ಸಂಬಂಧಗಳನ್ನು ಹೊಂದಬಹುದು. ಮಾನಸಿಕ ಆರೋಗ್ಯ ಅಸ್ವಸ್ಥತೆಗಳ ಅಪಾಯವನ್ನು ಕಡಿಮೆ ಮಾಡಬಹುದು ಮತ್ತು ಒಟ್ಟಾರೆ ಯೋಗಕ್ಷೇಮವನ್ನು ಸುಧಾರಿಸಬಹುದು.ವಿದ್ಯಾರ್ಥಿಗಳ ಜೀವನದಲ್ಲಿ ಮಾನಸಿಕ ಆರೋಗ್ಯ ಶಿಕ್ಷಣದ ಪ್ರಾಮುಖ್ಯತೆಯು ಪ್ರಮುಖ ಪಾತ್ರ ವಹಿಸುತ್ತದೆ ಏಕೆಂದರೆ ಅದು ಇತರರೊಂದಿಗೆ ಹೊಸ ಸಂಪರ್ಕಗಳನ್ನು ಬೆಳೆಸಲು ಸಹಾಯ ಮಾಡುತ್ತದೆ. ವಿದ್ಯಾರ್ಥಿಗಳು ಮಾನಸಿಕವಾಗಿ ಸದೃಢರಾಗಿರುವುದು ಮತ್ತು ದೈಹಿಕವಾಗಿ ಸದೃಢರಾಗಿರುವುದು ಮುಖ್ಯ.

**–ರಾಣಪ್ಪ ಡಿ ಪಾಳಾ**

---




# ನೀನೊಂದು ಭ್ರಮೆ

ನೀನಿರದೆ ಇಡೀ ಮನದ ಮನೆ ಶಿಥಿಲಗೊಂಡಿದೆ
ಕಳೆದ ನೆನಪುಗಳು ನನ್ನ ನಗು ಕದ್ದಿವೆ
ಬದುಕು ಹೇಗೋ ಸಾಗುತ್ತದೆ ,ಆದರೆ
ನನ್ನ ನೋವುಗಳಿಗೆಲ್ಲ ನಿನ್ನ ಹೆಗಲು ಬೇಕಿತ್ತು
ನನ್ನ ಮನದ ಒಳಗಿನ ಒಣಗದ ಗಾಯಗಳಿಗೆ ನಿನ್ನ ಮಾತುಗಳ ಔಷಧಿ ಬೇಕಿತ್ತು
ಹೌದು, ನೀನಿಲ್ಲ ಆದರೆ
ನೀನಿಲ್ಲ ಎಂಬ ಕೊರತೆ ಜೊತೆಯಲ್ಲಿದೆ
ಯಾರ ಗೈರು ಹಾಜರಿಯೂ ನನ್ನ ಕಾಡಲಾರದು
ಗಳಿಗೆ ಗಳಿಗೆಯೂ ನಿನ್ನೊಲವಿರಲು
ಇನ್ನಾರ ಹ್ರದಯದೂರ ತಲುಪಲಾರೆ
ನಿನ್ನ ಪ್ರೇಮದ ಆಯಸ್ಕಾಂತ ನನ್ನೆಳೆದಿಟ್ಟಿದೆ
ಮರಳಿ ಬರುವುದಾದರೆ ಬಂದು ಬಿಡು
ನೀನು ಹೋಗಿರುವ ವಿಷಯ ಭ್ರಮೆಯಾಗಲಿ

ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16–11–2025 ಪುಟಗಳು:16

# ನಿರಂತರ ಸುರಿದ ಮಳೆ, ಲಕ್ಕಿ ರೋಗಕ್ಕೆ ತುತ್ತಾದ ತೊಗರಿ ಬೆಳೆ, ಕಂಗಾಲಾದ ರೈತ

ಕಲಬುರಗಿ ಜಿಲ್ಲೆಯ ಕಾಳಗಿ ತಾಲೂಕಿನ ರಟಕಲ್ ಗ್ರಾಮದ ಚಿತ್ತು ತಂದೆ ಗೋಪು ಜಾದವ ರವರ ಸುಮಾರು 5 ಎಕರೆ ಹೊಲದಲ್ಲಿ ಈ ಲಕ್ಕಿ ರೋಗ ಕಂಡು ಬಂದಿದೆ. ಸುಮಾರು ತಿಂಗಳಿಂದ ಸುರಿಯುತ್ತಿದ್ದ ಮಳೆಯ ಪರಿಣಾಮ ತಾಲ್ಲೂಕಿನಲ್ಲಿ ತೊಗರಿ ಬೆಳೆ ಗೊಡ್ಡು ಅಂದರೆ ಲಕ್ಕಿ ರೋಗಕ್ಕೆ ತಿರುಗಿದ್ದು ಅನ್ನದಾತರು ಕಂಗಾಲಾಗಿದ್ದಾರೆ.

ಈ ಪ್ರದೇಶದ ರೈತರು ಮೊದಲೇ ತೊಗರಿ ಬೆಳೆ ಮೇಲೆ ಅವಲಂಬಿತರಾಗಿ ಪ್ರತಿವರ್ಷ ಮುಂಗಾರಿನಲ್ಲಿ ಅತಿ ಹೆಚ್ಚು ತೊಗರಿ ಬಿತ್ತನೆ ಮಾಡುತ್ತಾರೆ.

ಸಿಕ್ಕಾಪಟ್ಟೆ ಖರ್ಚು ಮಾಡಿ ಕಷ್ಟಪಟ್ಟು ಎಷ್ಟೋ ಸಲ ಉತ್ತಮ ಇಳುವರಿ ತೆಗೆದಾಗಲೂ ಸರಿಯಾದ ಬೆಂಬಲ ಬೆಲೆ ದೊರೆಯದೆ ಕೃಷಿಕರು ಹೈರಾಣಾಗಿದ್ದಾರೆ. ಕೈಗೆ ಬಂದಂತಹ ತುತ್ತು ಬಾಯಿಗೆ ಬರದಂತಾಯಿತು ಎಂದು ರೈತರು ಅಳಲು ತೋಡಿಕೊಂಡರು. ಪ್ರತಿ ವರ್ಷ ಆ ವೇಳೆ ಹೆಸರು, ಉದ್ದು ಆದರೂ ಚೆನ್ನಾಗಿ ಬೆಳೆದು ಒಂದಿಷ್ಟು ಖರ್ಚಿಗೆ ಅನುಕೂಲ ಮಾಡಿಕೊಳ್ಳಬಹುದಿತ್ತು.

ಆದರೆ ಈ ವರ್ಷ ಮಿತಿಮೀರಿ ಸುರಿದ ಮಳೆಗೆ ಮುಂಗಾರಿನ ಹೆಸರು, ಉದ್ದು ಮೊದಲೇ ಕೈ ಕೊಟ್ಟಿವೆ. ತೊಗರಿಯಾದರೂ ಕೈ ಹಿಡಿಯುತ್ತಾ ಎಂದುಕೊಂಡಿದ್ದ ರೈತರಿಗೆ ಹೂವು, ಮೊಗ್ಗು ಮೂಡುವ ಮುಂಚೆಯೇ ತೊಗರಿ ಗೊಡ್ಡುರೋಗ ಬಾಧೆಗೆ ತುತ್ತಾಗಿದ್ದನ್ನು ನೋಡಿ ಮರುಗುತ್ತಿದ್ದಾರೆ.




ರಟಕಲ್, ಕಂಚನಾಳ, ಹಲಸಗೋಡ, ಮುಕ್ರಂಬ, ಕಂದಗೋಳ, ಗೊಣಗಿ, ಬೆಡಸೂರ ಮುಂತಾದ ಗ್ರಾಮಗಳಿಂದ ರೈತರು ಕೃಷಿ ಅಧಿಕಾರಿಗಳಿಗೆ ಕರೆ ಮಾಡಿ ತೊಗರಿ ಗೊಡ್ಡು ರೋಗಕ್ಕೆ ಹೋಗಿದ್ದರ ಬಗ್ಗೆ ಗಮನಕ್ಕೆ ತರುತ್ತಿದ್ದಾರೆ. ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಬೆಳವಣಿಗೆ ಕುಂಠಿತಗೊಂಡಿವೆ. ಕೆಲವು ಕಡೆ ರೈತರು ನೆಟ್ ರೋಗದ ತೊಗರಿ ಪೂರ್ತಿಯಾಗಿ ಕಿತ್ತುಹಾಕಿ ಸಂಕಷ್ಟ ತೋಡಿಕೊಳ್ಳುತ್ತಿದ್ದಾರೆ.

ಕೇವಲ ತೊಗರಿಯೊಂದೇ ಬಿತ್ತನೆ ಮಾಡಿದ್ದ ರೈತರು ಈಗ ನೆಟಿರೋಗ ಕಂಡು ಕುಸುಬೆ, ಕಡ್ಡಿಯೂ ಬಿತ್ತನೆ ಮಾಡದ ಸ್ಥಿತಿಯಲ್ಲಿ ದಿಕ್ಕುತೋಚದೆ ಕುಳಿತಿ–ದ್ದಾರೆ. ಕೃಷಿ ಮನೆತನದ ವರ್ಷದ ಖರ್ಚಿನ ಚಿಂತೆ ಮಾಡುತ್ತಿದ್ದಾರೆ. ಬೆಳೆ ವೀಕ್ಷಣೆಗೆ ಬಂದ ಕೃಷಿ ವಿಜ್ಞಾನಿ ಇಸೂಫ್ ಅಲಿ ಕೆವಿಕೆ ಕಲ್ಬುರ್ಗಿ, ವೀರೇಶ್ ರಾಥೋಡ ಎಡಿಎ ಚಿಂಚೋಳಿ, ರೈತರಾದ ಚಿತ್ತು ಜಾದವ, ಚನ್ನಪ್ಪ, ರೈತ ಮಹಿಳೆ ವಿಠೋಬಾಯಿ, ವೀರಣ್ಣ ಗಂಗಾಣಿ ಅಧ್ಯಕ್ಷ ರೈತ ಸಂಘ ಮತ್ತು ರೈತ ಸೇನೆ ಕಾಳಗಿ ಸೇರಿದಂತೆ ಇನ್ನೂ ಅನೇಕರಿದ್ದರು.

**ವರದಿ ಎಸ್. ವಿ. ಗಂಗಾಣಿ**

## ಮಕ್ಕಳ ದಿನಾಚರಣೆ ಪ್ರಯುಕ್ತ ಚಿತ್ರಕಲಾ ಸ್ಪರ್ಧೆ



**ಬೆಳಗಾವಿ / ಸವದತ್ತಿ :**ಮಕ್ಕಳ ದಿನಾಚರಣೆಯ ನಿಮಿತ್ಯವಾಗಿ ಎಸ್ .ಬಿ. ಐ ಲೈಫ್ ಇನ್ಶೂರೆನ್ಸ್ ಗೋಕಾಕ ಶಾಖೆಯ ಅಡ್ವೈಜರ್ ಶ್ರೀ ನಾಗರಾಜ ಕಮ್ಮಾರ, ಸಹಾಯಕ ಅಭಿನವ ಕಮ್ಮಾರ ಇವರು ಹಿಪ್ಪೊ ಕ್ಯಾಂಪ್ ಕಿಡ್ಸ್ ರೇನಬೋ ಶಾಲೆ ಹೊಸೂರ್ ಇಲ್ಲಿ ನಡೆಸಿದ ಚಿತ್ರಕಲಾ ಸ್ಪರ್ಧೆಯಲ್ಲಿ ಮಕ್ಕಳು ಉತ್ಸಾಹದಿಂದ ಭಾಗವಹಿಸಿದರು. ಇದೊಂದು ಉತ್ತಮ ಮಾದರಿ ಸ್ಕೂಲ್ ಆಗಿದ್ದು ಇಲ್ಲಿಗೆ ಹೊಸೂರು ಮತ್ತು ಸುತ್ತಮುತ್ತಲಿನ ಊರುಗಳಿಂದ ಅನೇಕ ವಿದ್ಯಾರ್ಥಿಗಳು ಬರುತ್ತಾರೆ, ಅಧ್ಯಕ್ಷರಾದ ಶ್ರೀ ಮಂಜುನಾಥ ಜೆ. ಕೊಳ್ಳಿ ಮತ್ತು ಶ್ರೀಮತಿ ಶ್ರೀದೇವಿ ಎಂ. ಕೊಳ್ಳಿ ಇವರ ಮಾರ್ಗದರ್ಶನದಲ್ಲಿ ಸರ್ಕಾರದ ಯಾವುದೇ ಅನುದಾನವನ್ನು ಪಡೆದುಕೊಳ್ಳದೆ ತಮ್ಮ ಸ್ವಂತ ಖರ್ಚಿನಿಂದ ಶಾಲೆಯನ್ನು ನಡೆಸುತ್ತಿದ್ದಾರೆ ಇಲ್ಲಿ ನುರಿತ ಶಿಕ್ಷಕಿಯರ ವೃಂದವಾದ ಶ್ರೀಮತಿ ಜ್ಯೋತಿ ಹುಂಬಿ, ಶ್ರೀಮತಿ ರಾಜಶ್ರೀ ಬೆಳ್ಳಿಕಟ್ಟಿ ಇವರು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದು ಹಾಗೂ ಆಯಾ ಆಗಿ ಶ್ರೀಮತಿ ರೇಖಾ ಬರ್ಮಣ್ಣವರ್ ಕಾರ್ಯ ನಿರ್ವಹಿಸುತ್ತಿದ್ದಾರೆ.

**ವರದಿ ಮಂಜು. ಎಂ. ಚಿಕ್ಕಣ್ಣವರ**

## ಮೈಸೂರು ದಸರಾ ವಸ್ತು ಪ್ರದರ್ಶನ






ಮೈಸೂರು ದಸರಾ ವಸ್ತು ಪ್ರದರ್ಶನವು ದಸರಾ ಸಂದರ್ಭದಲ್ಲಿ ಪ್ರಾರಂಭವಾಗುವ ಒಂದು ದೊಡ್ಡ ಕಾರ್ಯಕ್ರಮವಾಗಿದ್ದು, ಅಲ್ಲಿ ವಿವಿಧ ರೀತಿಯ ಮಳಿಗೆಗಳು, ಆಟಿಕೆಗಳು, ತಿನಿಸುಗಳು ಮತ್ತು ಮನರಂಜನೆ ಸೇರಿದಂತೆ ಎಲ್ಲವೂ ಲಭ್ಯವಿರುತ್ತವೆ.

ಈ ಪ್ರದರ್ಶನವನ್ನು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರವು ಆಯೋಜಿಸುತ್ತದೆ, ಇದು ದಸರಾ ಹಬ್ಬ ಮುಗಿದ ನಂತರವೂ ಕೆಲವು ದಿನಗಳವರೆಗೆ ಮುಂದುವ–ರಿಯುತ್ತದೆ. ಇಲ್ಲಿ ಸರ್ಕಾರಿ ಹಾಗೂ ಖಾಸಗಿ ಮಳಿಗೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಮನರಂಜನಾ ಚಟುವಟಿಕೆಗಳು ಸಹ ಇರುತ್ತವೆ.

**ವೈವಿಧ್ಯಮಯ ಮಳಿಗೆಗಳು:** ಮನೆ ಬಳಕೆ ಸಾಮಗ್ರಿಗಳು, ವಾಹನಗಳು, ಕೃಷಿ ಯಂತ್ರೋಪಕರಣಗಳು, ಕೈಗಾ–ರಿಕಾ ಉತ್ಪನ್ನಗಳು, ಹಸ್ತಕಲೆಗಳು ಮತ್ತು ಆಹಾರ–ಪಾನೀಯಗಳಿಗೆ ಸಂಬಂಧಿಸಿದ ಮಳಿಗೆಗಳು, ಮಕ್ಕಳಿಗಾಗಿ ಆಟದ ಪಾರ್ಕ್, ಜೋಕರ್‌ಗಳು ಮತ್ತು ಇತರ ಮನರಂಜನಾ ಚಟುವಟಿಕೆಗಳು ಲಭ್ಯವಿರುತ್ತವೆ.

ಸಾಂಸ್ಕೃತಿಕ ಕಾರ್ಯಕ್ರಮಗಳು: ಪಿ. ಕಾಳಿಂಗರಾವ್ ಗಾನಮಂಟಪದಲ್ಲಿ ಪ್ರತಿದಿನವೂ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

ಶಾಪಿಂಗ್ ಮತ್ತು ಊಟ: ಪ್ರವಾಸಿಗರು ಇಲ್ಲಿ ವಿವಿಧ ವಸ್ತುಗಳನ್ನು ಖರೀದಿಸಬಹುದು ಮತ್ತು ರುಚಿಕರವಾದ ಬಗೆ ಬಗೆಯ ಆಹಾರವನ್ನು ಸವಿಯಬಹುದು. ಇದು ಮೈಸೂರಿನ ಪ್ರಮುಖ ಪ್ರವಾಸಿ ಆಕರ್ಷಣೆಗಳಲ್ಲಿ ಒಂದಾಗಿದ್ದು, ದೇಶದ ವಿವಿಧ ಭಾಗಗಳಿಂದ ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಹೆಚ್ಚುವರಿ ಮಳಿಗೆಗಳು: ಇಂದಿರಾ ಕ್ಯಾಂಟೀನ್, ವಾರ್ತಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೈಗಾರಿಕೆ ಇಲಾಖೆ, ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಂತಹ ವಿವಿಧ ಇಲಾಖೆಗಳು ತಮ್ಮ ಮಳಿಗೆಗಳನ್ನು ಪ್ರದರ್ಶಿಸಿವೆ.

ಭವಿಷ್ಯದ ಅಭಿವೃದ್ಧಿ: ದಸರಾ ವಸ್ತು ಪ್ರದರ್ಶನವನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಸಂಗೀತ ಕಾರಂಜಿ, ಉದ್ಯಾನ ಮತ್ತು ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣದಂತಹ ಯೋಜನೆಗಳನ್ನು ಸಹ ರೂಪಿಸಲಾಗಿದೆ.

**ವರದಿ ಜೆ. ಪ್ರದೀಪ್**

ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16



# ತಿಮ್ಮಕ್ಕ

ಹುಟ್ಟೂರ  ಬೀದಿಯಲಿ ತಿಮ್ಮಕ್ಕ ನಡೆದಿಹಳು
ಹೊತ್ತಾರೆ ಹೊಲಗದ್ದೆ ಕೆಲಸಕೆಂದು ಟ
ಹೊತ್ತೇರೊ ಹೊತ್ತಾಗೆ ಸುಸ್ತಾಗಿ ಕುಳಿತಿಹಳು
ನಿತ್ರಾಣವಾಗುತಲಿ ಮರದ ಕೆಳಗೆ ಟ
ಸುತ್ತ ಬಿರು ಬಿಸಿಲಿನಲಿ ಬಳಲಿ ಬೆಂಡಾಗಿರಲು
ಹತ್ತಿರದ ಮರದಡಿಯೆ ತಂಪಡರಲು ಟ
ಸುಸ್ತಾದ ಬಡಜೀವ ಮರದ ತಂಗಾಳಿಯಲಿ
ಮತ್ತೆ ಕಸು ಪಡೆಯುತಲಿ ದಣಿವಾರಿತು ಟ

ಹೊಸ ಹುರುಪು ಪಡೆಯುತಲಿ ಖುಷಿಪಟ್ಟ ತಿಮ್ಮಕ್ಕ
ಹಸನಾದ ಮರ ನೋಡಿ ಕೈಮುಗಿಯುತ ಟ
ಉಸಿರಾದೆ ಜೀವರಿಗೆ ನೆರಳು ಫಲ ನೀಡುತಲಿ
ಹೊಸದಾದ ನರಜನುಮ ಪಡೆಯೆಂದಳು ಟ

ಬೇಡ ಬೇಡೆಲೆ ತಾಯಿ ಮರ ಮಾತನಾಡುತಲಿ
ಬೇಡ ಮಾನವ ಜನ್ಮ ಬಲು ಕಟುಕನು ಟ
ನೀಡಲಾರನು ತಾನು ಪಡೆದುದಕೆ ಪ್ರತಿಯಾಗಿ
ಕಾಡುವನು ಕಾಡ ಕುಲ ತಾ ಕಡಿವನು ಟ

ದುಷ್ಟತನ ತುಂಬಿರುವ ನರನಾಗಿ ನಾಬಾಳೆ
ಕಷ್ಟವೆನಗೇನಿಲ್ಲ ಮರವಾಗುವೆ ಟ
ನಿಟ್ಟುಸಿರ ನಿಡಿಯುತಿಹ ಜೀವರಿಗೆ ನಾ ನೆರಳ
ನಷ್ಟವಿಲ್ಲದೆ ಕೊಡುವೆ ಮರವೆಂದಿತು ಟ

ವೃಕ್ಷದಾ ನುಡಿ ಕೇಳಿ ನಿಶ್ಚಯದಿ ತಿಮ್ಮಕ್ಕ
ದಕ್ಷ ಮನದೊಳು ವೃಕ್ಷ ನಾ ನೆಡುವೆನು ಟ
ಪಕ್ಷಿ ಮೃಗ ಸಂಕುಲವು ತಂಪಾಗಿ ಇರುವಂತೆ
ಲಕ್ಷ್ಯ ವಿರಿಸುತ ಮರವ ನಾ ಬೆಳೆಸುವೆ ಟ

ಎಂದೆನುತ ತಿಮ್ಮಕ್ಕ ಮುಂದಾಗೆ ಹೊಸದೊಂದು
ಸುಂದರದ ಇತಿಹಾಸ ತಾ ಬರೆದಳು ಟ
ಬಂಧ ಮರದೊಳು ಬೆಳೆಸಿ ನೀರೆರೆದು ರಕ್ಷಿಸುತ
ಚಂದದಲಿ ಮುಕುತಿಯನೆ ತಾ ಪಡೆದಳು ಟ

**– ಕುಸುಮಾವತಿ ಚಂದ್ರಶೇಖರ ಶೆಟ್ಟಿ**
**ನೇರಳಕಟ್ಟೆ**

---



# ಗಾಸಿಪ್ ಗಾಳಕ್ಕೆ ಸಿಲುಕದಿರಿ

ಕೆಲಸವಿಲ್ಲದ ಜನರು ತಾವು ತಿಂದ ಆಹಾರ ಜೀರ್ಣವಾಗಬೇಕಾದರೆ ಮತ್ತೊಬ್ಬರ ಬೆನ್ನಹಿಂದೆ ಗಾಸಿಪ್ ಮಾಡಲೇಬೇಕು. ಇವರ್ಯಾರೂ ಬೇರೆ ಲೋಕದಿಂದ ಬಂದವರಲ್ಲ, ನಮ್ಮ ಸುತ್ತಮುತ್ತ ಇರುವವರೇ. ನಾವು ಸಹ ಇದೆ ಕೆಟಗೇರಿಗೆ ಸೇರಿರಬಹುದು. ಕಚೇರಿಯಲ್ಲಿ ಕೆಲಸ ಮಾಡುವ ಸಹೋದ್ಯೋಗಿಗಳು, ನಾವು ವಾಸಿಸುವ ಗಲ್ಲಿಗಳಲ್ಲಿ, ಸಂಬಂಧಿಕರಲ್ಲಿ ಹೀಗೆ ನಮಗೆ ಪರಿಚಯವಿರುವವರೇ ಆಗಿರುತ್ತಾರೆ. ಅಪರಿಚಿತರು ಗಾಸಿಪ್ ಮಾಡುವುದಿಲ್ಲ. ನಮ್ಮ ಮುಂದೆ ನಮ್ಮನ್ನು ಹೊಗಳಿ ಅಟ್ಟಕ್ಕೇರಿಸಿ, ಬೆನ್ನ ಹಿಂದೆ ಇಲ್ಲದ ಸುದ್ದಿಗಳನ್ನು ಹಬ್ಬಿಸಿ ಖುಷಿ ಪಡುತ್ತಾರೆ. ಇವರು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತಾರೆ.

ತಾವು ಸಾಧಿಸಲಾಗದನ್ನು ಮತ್ತೊಬ್ಬರು ಸಾಧಿಸಿದರೆ, ತಾವು ಸಿಗದ ಮರ್ಯಾದೆ ಮತ್ತೊಬ್ಬರಿಗೆ ಸಿಕ್ಕರೆ, ತಾವು ಗಳಿಸಲಾಗದ ಹಣ ಮತ್ತೊಬ್ಬರು ಗಳಿಸಿದರೆ ಹೀಗೆ ತಮಗೆ ಮಾಡಲಾಗದನ್ನು ತಮ್ಮ ಪರಿಚಯದವರು, ಸಂಬಂಧಿಕರು ಮಾಡಿದರೆ ಅವರ ಬಗ್ಗೆ ಗಾಸಿಪ್ ಹಬ್ಬಿಸಿ ವಿಚಿತ್ರ ಸುಖ ಅನುಭವಿಸುತ್ತಾರೆ. ತಾನು ಹಣ ಗಳಿಸಿದರೆ ನ್ಯಾಯಯುತವಾದದ್ದು ಮತ್ತೊಬ್ಬರು ಗಳಿಸಿದರೆ ಅದು ಅನ್ಯಾಯದ, ಮತ್ತೊಬ್ಬರಿಗೆ ಟೋಪಿ ಹಾಕುವುದು. ಅದರಲ್ಲೂ ಮಹಿಳೆಯರ ಬಗ್ಗೆ ಗಾಸಿಪ್ ಗಳನ್ನು ಹರಡುವುದೇ ಹೆಚ್ಚು. ಯಾರದೊ ಜೊತೆ ಮಾತನಾಡಿದರೂ ಅದಕ್ಕೊಂದು ಕಥೆ ಕಟ್ಟಿ ಬಿಡುತ್ತಾರೆ. ಇಂತಹ ಕೆಲಸಗಳನ್ನು ಮಾಡುವವರು ಮೈತುಂಬ ಕೆಲಸವಿಲ್ಲದ ಖಾಲಿ ಜನಗಳೇ ಹೊರತು, ಮೈಮುರಿದು ದುಡಿಯುವವರಲ್ಲ.

"ಗಾಸಿಪ್ ಗಳಿಗೆ ರೆಕ್ಕೆ-ಪುಕ್ಕಗಳಿರುವುದಿಲ್ಲ ಆದರೂ ಅವು ಸಾವಿರಾರು ಕಿಲೋಮೀಟರ್ ಹಾರಬಲ್ಲವು" ಯಾರದೊ ಬಗ್ಗೆ ಮಾಡಿದ ಸಣ್ಣ ಗಾಸಿಪ್ ಗಳು ಒಬ್ಬರಿಂದ ಇನ್ನೊಬ್ಬರಿಗೆ ಎಷ್ಟೋ ದೂರ ಚಲಿಸಿ ಗಾಸಿಪ್ ಗೆ ಒಳಗಾದ ವ್ಯಕ್ತಿಯ ವೈಯಕ್ತಿಕ ಜೀವನ ಹಾಗೂ ವೃತ್ತಿ ಜೀವನದ ಬಗ್ಗೆ ಪರಿಣಾಮ ಬೀರಬಲ್ಲದು. ಇಂದಿನ ವಿವಾಹ ವಿಚ್ಛೇದನಕ್ಕೆ ಕಾರಣ ಹುಡುಕಿದಾಗ ಇದು ಒಂದಾಗಿರುತ್ತದೆ. ಅವನು ಯಾವುದೊ ಹುಡಗಿಯ ಜೊತೆ ಮಾತನಾಡಿದ್ದನ್ನು, ಹೆಂಡತಿ ತನ್ನ ಸಹೋದ್ಯೋಗಿ ಜೊತೆ ಆತ್ಮೀಯತೆಯಿಂದ ಇರುವುದನ್ನು ತಪ್ಪಾಗಿ ಭಾವಿಸಿ, ಇಲ್ಲವೇ ಉದ್ದೇಶಪೂರ್ವಕವಾಗಿಯೇ ಗಾಸಿಪ್ ಹರಡಿದರೆ ಒಂದು ಸುಂದರವಾದ ಕುಟುಂಬ, ದಾಂಪತ್ಯ ಒಡೆದು ಹೋಗುತ್ತದೆ. ಗಾಸಿಪ್ ಗೆ ಹೆದರಿ ಪ್ರಾಣ ಕಳೆದುಕೊಂಡವರು ಇದ್ದಾರೆ.

ಕೈಲಾಗದ ಶತ್ರು ಮತ್ತು ಹಿತ ಶತ್ರುಗಳ ಕೊನೆಯ ಅಸ್ತ್ರವೇ ಗಾಸಿಪ್. ನಿಮ್ಮ ಬಗ್ಗೆ ನಿಮ್ಮ ಬೆನ್ನ ಹಿಂದೆ ಮಾತನಾಡುತ್ತಿದ್ದಾರೆಂದರೆ ಅವರು ನಿಮಗಿಂತಲೂ ಎರಡು ಹೆಜ್ಜೆ ಹಿಂದೆ ಇದ್ದಾರೆಂಬುವುದನ್ನು ನಾವು ತಿಳಿದುಕೊಳ್ಳಬೇಕು. ನಮ್ಮ ಕಾಲೇಳೆಯುವವರು ನಮ್ಮ ಕಾಲ ಕೆಳಗೆ ಇರಬೇಕು. ನಮ್ಮೆದರು ಬಂದು ಮಾತನಾಡುವ ಧೈರ್ಯ, ತಾಕತ್ತು ಅವರಿಗಿಲ್ಲ ಎಂದು ಸಮಾಧಾನಪಟ್ಟಕೊಳ್ಳಬೇಕು. ಅವರು ಕೇವಲ ಹಿಂದೆಯೇ "ಅವನು ಹಿಂಗಂತೆ, ಅವಳು ಹೀಗೆ ಮಾಡಿದಳಂತೆ" ಹೀಗೆ ಬಾಯಿಚಪಲಕ್ಕೆ ಮತ್ತೊಬ್ಬರ ಬಗ್ಗೆ ಮಾತನಾಡುತ್ತಾ ತಾನು ಮಾಡಬೇಕಾದ ಕರ್ತವ್ಯವನ್ನು, ಜವಾಬ್ದಾರಿಗಳನ್ನು ಮರೆಯುತ್ತಾರೆ.

ಗಾಸಿಪ್ ಗಳ ಗಾಳಕ್ಕೆ ಸಿಲುಕಿದರೂ ನಾವು ಹೆದರದೆ ಅದನ್ನು ಎದುರಿಸುವ ಮಾನಸಿಕ ಸಾಮರ್ಥ್ಯವನ್ನು ಬೆಳಸಿಕೊಳ್ಳಬೇಕು. ನಮ್ಮ ಮುಂದೆ ಬಂದು ಹೇಳುವವರು ಅವರೇ ಆಗಿರುತ್ತಾರೆ. "ಅವರು ನಿಮ್ಮ ಬಗ್ಗೆ ಹೀಗೆ ಮಾತನಾಡುತ್ತಿದ್ದರು" ಎಂದು ಹೇಳಿದರೆ ನಮ್ಮಲ್ಲಿ ಕೋಪ, ರೋಷಗಳು ಉಕ್ಕುತ್ತವೆ. ಮಾನಸಿನ ನಿಯಂತ್ರಣ ಕಳೆದುಕೊಂಡು ಏನೇನೊ ಒದರಾಡುತ್ತವೆ. ಮಹಿಳೆಯರಾದರೆ ಕಣ್ಣೀರು ಹಾಕುತ್ತಾರೆ. ಇವೆಲ್ಲಾ ನಮ್ಮ ಬುದ್ಧಿಯನ್ನು ಮಂಕಾಗಿಸುತ್ತವೆ.  ಆದರೆ ಎಲ್ಲಾ ಗಾಸಿಪ್ ಗಳಿಗೆ ಉತ್ತರಗಳನ್ನು, ಸಮಜಾಯಿಷಿಗಳನ್ನು ಕೊಡುವ ಅವಶ್ಯಕತೆ ಇರುವುದಿಲ್ಲ.

ನಾವು ಎಷ್ಟು ಜನಕ್ಕೆ ಸಮಜಾಯಿಷಿ ಹೇಳಲು ಸಾಧ್ಯ ಹೇಳಿ. ಒಂದು ವೇಳೆ ನಾವು ಗಾಸಿಪ್ ಗಳಿಗೆ ಹೆದರಿ ಕಣ್ಣೀರು ಹಾಕಿದರೆ, ಹೆದರಿದರೆ ಗಾಸಿಪ್ ಮಾಡಿದವರ ಉದ್ದೇಶ ಈಡೇರಿದಂತಾಗುತ್ತದೆ. ನಾವು ಎಂತಹ ಗಾಸಿಪ್ ಗಳು ನಮ್ಮ ಮೇಲೆ ಬಂದರೂ ಅದಕ್ಕೆ ಒಂದೇ ದಿವ್ಯ ಓಷಧಿಯೆಂದರೆ  'ಉದಾಸೀನತೆ'. ನಾವು ಅದರ ಬಗ್ಗೆ ಯೋಚಿಸದೇ ಸುಮ್ಮನಿರುವದು. ಸಣ್ಣ ಗಾಸಿಪ್ ಗೆ ಹೆಚ್ಚಿನ ಪ್ರತಿಕ್ರಿಯೆ ತೋರಿಸಿದರೆ ನಮ್ಮ ಮನಸ್ಸಿನ ಹತೋಟಿಯ ಕೊರತೆಯನ್ನು ತೋರಿಸುತ್ತದೆ. ಜಗತ್ತಿನ ಸಾಧಕರ ಜೀವನ ಚರಿತ್ರೆ ನೋಡಿದಾಗ ನಮಗಿಂತಲೂ ಹೆಚ್ಚಿನ ಗಾಸಿಪ್ ಗಳನ್ನು ಅನುಭವಿಸಿರುತ್ತಾರೆ. ಆದರೆ ಅವರು ತಮ್ಮ ಕಾರ್ಯಕ್ಷೇತ್ರದಿಂದ ಹಿಂದೆ ಸರಿಯದೇ ಮತ್ತೊಂದು ಸಾಧನೆಯತ್ತ ಮುನ್ನುಗ್ಗುತ್ತಾರೆ. ದೊಡ್ಡ ವ್ಯಕ್ತಿಗಳು ಚಿಕ್ಕಪುಟ್ಟ ಗಾಸಿಪ್ ಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೇ ಉದಾಸೀನ ಮಾಡಿ ಮುಂದೆ ಹೋಗುತ್ತಾರೆ. ನಾವು ಆತ್ಮೀಯರೆಂದು ನಮ್ಮೆಲ್ಲಾ ಗುಟ್ಟಗಳನ್ನು ಹೇಳಿಕೊಂಡಿರುತ್ತೇವೆ. ಸಮಯ ನೋಡಿಕೊಂಡು ಆತ್ಮೀಯರೇ ಗುಟ್ಟುಗಳನ್ನು ರಟ್ಟುಮಾಡಿ ಖುಷಿ ಪಡುತ್ತಾರೆ. ಸಾಧ್ಯವಾದಷ್ಟು ನಮ್ಮ ವೈಯಕ್ತಿಕ ವಿಷಯಗಳನ್ನು ಮತ್ತೊಬ್ಬರ ಮುಂದೆ ಹೇಳುವ ಮುನ್ನ ಯೋಚಿಸಬೇಕು. ಸಾಧ್ಯವಿದ್ದಷ್ಟೇ ನಮ್ಮ ಬಗ್ಗೆ ಹೇಳಿಕೊಳ್ಳಬೇಕು. ನಮ್ಮವರೇ ನಮ್ಮ ಬಗ್ಗೆ ಗಾಸಿಪ್ ಮಾಡಿಕೊಳ್ಳುವ ಅವಕಾಶಕ್ಕೆ ನಾವೇ ವಿಷಯಗಳನ್ನು ಕೊಡಬಾರದು. ಒಂದು ವೇಳೆ ಗಾಸಿಪ್ ನ ಗಾಳಕ್ಕೆ ಸಿಕ್ಕರೂ ಉದಾಸೀನತೆಯೇ ಮದ್ದು ಎಂಬುದನ್ನು ಮರೆಯಬಾರದು.

**–ಬಸವರಾಜ ಹೊನಗೌಡರ**

ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16

# ಮನದ ತೊಳಲಾಟ.. ನಿತ್ಯ ಹೋರಾಟ



ಮನಸ್ಸೆಂಬುದು ಹಲವು ಯೋಚನೆಗಳ ಸಾಗರ, ಒಮ್ಮೆ ಶಾಂತಿಯಿಂದ ಇದ್ದ ಮನಸ್ಸು ಇನ್ನೊಮ್ಮೆ ಕದಡಿದ ಸಲಿಲದಂತಾಗುತ್ತದೆ. ಇನ್ನೊಮ್ಮೆ ಎಲ್ಲಿಗೋ ಪಯಣಿಸುತ್ತದೆ. ಒಮ್ಮೆ ತೊಳಲಾಟ, ತಾಕಲಾಟ, ಅಂತರಂಗದ ಬಡಿದಾಟ, ಹಾರಾಟ, ಚೀರಾಟ ಗಳ ಒಳಗೆ ಮನಸ್ಸಿನಲ್ಲಿ ಕ್ಷಣಕ್ಷಣವೂ ಹೋರಾಟ ನಡೆಯುತ್ತದೆ. ಹಾಗಿದ್ದರೆ ಈ ತೊಳಲಾಟ, ಹೋರಾಟಗಳು ಯಾರಿಗೆ ಕಾಡುವವು ಎಂಬ ಪ್ರಶ್ನೆಗೆ ಉತ್ತರ ಮನುಷ್ಯನಿಗೆ ಎಂಬುದು ಸತ್ಯ. ಮನವು ಮರ್ಕಟದಂತೆ ಚಂಚಲ, ಇದ್ದಲ್ಲಿ ಎಂದೂ ನಿಲ್ಲದು. ಈ ಚಂಚಲತೆಯಿಂದ ಅನೇಕ ಅನಾಹುತಗಳು, ಹೋರಾಟಗಳು ನಡೆದಿವೆ, ನಡೆಯುತ್ತಲೇ ಇವೆ. ಮನಸ್ಸಿನಲ್ಲಿ ಆಗುವ ತೊಳಲಾಟಕ್ಕೆಕಾರಣಗಳನ್ನು ಹುಡುಕುತ್ತಾ ಹೋದರೆ, ಧಾವಂತದ ಬದುಕು, ತಾಳ್ಮೆಯ ಕೊರತೆ, ಒಂದೇ ಸಲ ಆಕಾಶದಷ್ಟು ಎತ್ತರಕ್ಕೆ ಏರಬೇಕೆಂಬ ಅತ್ಯುತ್ಸಾಹ, ನಮ್ಮ ಅಹಂ, ಸ್ವಾರ್ಥ, ಪಡೆಯಬೇಕೆಂಬ ಹಂಬಲ , ಸಂಶೋಧನಾತ್ಮಕ ಗುಣ, ಸೃಜನಾತ್ಮಕತೆ, ಶೋಧನೆಗಳು, ಈ ಎಲ್ಲ ಋಣಧನಗಳ ಒಟ್ಟೂ ಮೊತ್ತ ಎನ್ನಬಹುದು. ಈ ಕಾರಣಗಳಿಂದ ಉಂಟಾಗುವ ಮನಸ್ಸಿನ ತೊಳಲಾಟದಿಂದ ನಿತ್ಯವೂ ಬದುಕಿನಲ್ಲಿ ಹೋರಾಟಗಳು ನಡೆಯುತ್ತಲೇ ಇವೆ. ಬೆಳಿಗ್ಗೆ ಎದ್ದೇಳುವುದರೊಂದಿಗೆ ಆರಂಭವಾಗುವ ಈ ಹೋರಾಟ ರಾತ್ರಿ ಮಲಗುವ ತನಕವೂ ಅನುದಿನವೂ ಇರುತ್ತದೆ. ಇದು ಕೆಲವರಿಗೆ ಮಾತ್ರ ಎನ್ನುವಂತಿಲ್ಲ. ಮನುಷ್ಯರಾದ ನಮಗೆಲ್ಲರಿಗೂ ಇದು ಸರ್ವೇಸಾಮಾನ್ಯ.

**ಒತ್ತಡದ ಬದುಕು**

ಒತ್ತಡ ಇಂದಿನ ಸಾಮಾನ್ಯ ಅಂಶವೆಂಬಂತಾಗಿದೆ. ಕೆಲಸದಲ್ಲಿ, ಕಾರ್ಯ ಕ್ಷೇತ್ರದಲ್ಲಿ, ಮನೆಯಲ್ಲಿ, ಕಛೇರಿಗಳಲ್ಲಿ ಈ ಒತ್ತಡ ಸಾಮಾನ್ಯವಾಗಿ ಕಂಡುಬರುತ್ತದೆ. ಎಷ್ಟೋ ಸಲ ಕಛೇರಿಯ ಕೆಲಸಗಳಲ್ಲಿ ಅದನ್ನು ಅರ್ಜಂಟಾಗಿ ಮುಗಿಸಬೇಕಾದ ಅನಿವಾರ್ಯತೆ ಇದ್ದಾಗ ಮನಸ್ಸಿನ ತೊಳಲಾಟ ಸಂಭವಿಸುತ್ತದೆ. ಸರಕಾರಿ ಕಛೇರಿ,ಅಥವಾ ಖಾಸಗಿಯಾಗಿ ಕೆಲಸಕ್ಕೆ ಹೋಗದಿರುವವರಲ್ಲಿ ಈ ಮನಸ್ಸಿನ ತೊಳಲಾಟದ ಒತ್ತಡ ಸ್ವಲ್ಪ ಕಡಿಮೆ ಎನ್ನಬಹುದು. ಕಾರಣ ಒಂದೆರಡು ನಿಮಿಷ ಹೆಚ್ಚು ಕಡಿಮೆಯಾದರೂ ನಡೆಯುತ್ತದೆ. ಆದರೆ ಒಬ್ಬ ಉದ್ಯೋಗಿ ಈ ಕೆಲಸವನ್ನು ಮತ್ತೆ ಮಾಡುವೆ ಎಂದರೆ ಅದು ಹಾಗೆಯೇ ಉಳಿದು ಬಿಡುತ್ತದೆ.ಇದರಿಂದಾಗಿ ಅವರನ್ನು ನಂಬಿದವರಿಗೆ ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ದೈನಂದಿನ ಕೆಲಸಗಳನ್ನು ಎಷ್ಟೇ ಪ್ರಮಾಣದಲ್ಲಿ ಹೊಂದಾಣಿಕೆ ಮಾಎಇಕೊಳ್ಳಬೇಕೆಂದರೂ ಆಗಾಗ ಬರು ಬದಲಾವಣೆಗಳಿಗೆ ಸ್ಪಂದಿಸಬೇಕಾಗಿರುವುದರಿಂದ ಒಮ್ಮೆ ಮ್ಮೆ ಈ ಒತ್ತಡವಾಗುತ್ತದೆ. ಉದಾಹರಣೆಗೆಗಾಗಿ ಕಾಲೇಜಿನ ಮಧ್ಯಸವಧಿ ಪರೀಕ್ಷೆಯ ತಯಾರಿಯಲ್ಲಿರುವಾಗಲೇ ಅರ್ಜಂಟಾಗಿ ನನಗೆ ಸಮೀಕ್ಷಾ ಮೇಲ್ವಿಚಾರಿಕೆಯ ಆದೇಶ ಬಂದಾಗಸಹಜವಾಗಿಯೇ ಮನಸ್ಸು ತೊಳಲಾಡಿತು. ಕಾರಣ ಮೊದಲೇ ಯೋಜಿಸಿಕೊಂಡಿರುವುದು ಬೇರೆ. ಒಮ್ಮೆಲೇ ಆದೇಶ ಬಂದಾಗ , ಆ ಆದೇಶಕ್ಕೆ ತಲೆಬಾಗಿ ಒಪ್ಪಿಕೊಂಡುಸಮೀಕ್ಷಾಕಾರ್ಯದ ಜವಾಬ್ದಾರಿಯಲ್ಲಿ ಭಾಗವಹಿಸುವುದು ನಾಡಿನ ಪ್ರಜೆ ಹಾಗೂ ಒಬ್ಬ ಸರಕಾರಿ ಉದ್ಯೋಗಸ್ಥೆಯಾದ ನನ್ನ ಕರ್ತವ್ಯವೂ ಆಗಿದೆ. ಹೀಗಿರುವಾಗ ಒತ್ತಡ ಸಹಜ. ಒಂದೆಡೆ ಪಠ್ಯಕ್ರಮವನ್ನು ಮುಗಿಸುವ ಜವಾಬ್ದಾರಿ, ಇನ್ನೊಂದೆಡೆ ಕರ್ತವ್ಯದ ಜವಾಬ್ದಾರಿ ಈ ಎರಡನ್ನೂ ನಿಭಾಯಿಸುವಾಗ ಮನಸ್ಸು ಬಳಲಿತ್ತದೆ, ಹೋರಾಟ ನಡೆಸುತ್ತದೆ, ಏನೇನನ್ನೋ ಯೋಚಿಸುತ್ತದೆ. ಈ ತೊಳಲಾಟಕ್ಕೆ ಕಾರಣ ಕಾರ್ಯದ ಬಾಹುಳ್ಯ.ಒತ್ತಡದ ಬದುಕು ಇಂದು ಪ್ರತಿಯೊಬ್ಬರಲ್ಲಿಯೂ ಇದೆ.

ಅಲ್ಲದೇ 55 + ದಾಟಿ ನಿವೃತ್ತಿಯ ಹತ್ತಿರದಲ್ಲಿರುವ, ಮುರಿದ ಕಾಲು ನೋವು, ಇನ್ನೂ ಅನೇಕ ಚಿಕ್ಕಪುಟ್ಟ ಆರೋಗ್ಯದ ಸಮಸ್ಯೆಗಳಿರುವ ನನ್ನಂತವರಿಗೆ ಮೇಲ್ವಿಚಾರಿಕೆಯಾಗಿ ಸುಮಾರು ನಾನೂರು ಮನೆಗಳ ಸಮೀಕ್ಷೆ, ಪ್ರತೀ ಮನೆಗೂ ಹೋಗಿ ಫೋಟೋಕ್ಲಿಕ್ಕಿಸಿ, ಲಾಕೇಶನ್ ತೆಗೆದುಹತ್ತೂ ಮಂದಿ ಸಮೀಕ್ಷಾದಾರಿಗೆ ಸಂಬಂಧಿಸಿದ ಇಡೀ ಹಳ್ಳಿಯ ವ್ಯಾಪ್ತಿಯನ್ನು ಕ್ರಾಸ್ ಚೆಕ್ ಮಾಡಿ ಬೆಳಿಗ್ಗೆ ಎಂಟರಿಂದ ರಾತ್ರಿ ಎಂಟರವರೆಗೆ ಕಾಲಿಗೆ ಚಕ್ರ ಕಟ್ಟಿದಂತೆ ಅಡ್ಡಾಡಿ ಬರುವುದು ಬಹಳ ಸಲೀಸಿನ ವಿಷಯವಂತೂ ಅಲ್ಲ. ಜೊತೆಗೆ ಕೆಲವು ಮನೆಗಳಲ್ಲಿ ಸ್ವಾಗತ ಸಿಕ್ಕರೆ ಇನ್ನುಕೆಲವು ಮನೆಗಳಲ್ಲಿ ಬಯ್ಗುಳದ ಸ್ವಾಗತ. ಸರಕಾರದ ಉದ್ಯೋಗಿಗಳನ್ನೇ ಬಯ್ದು ಕಳಿಸುವ ಇವರು , ನಮ್ಮಮೇಲೆ ಯಾರದೋ ಸೇಡುತೀರಿಸಿಕೊಂಡಂತೆ ಭಾಸವಾಗುತ್ತದೆ. ಪ್ರಾಮಾಣಿಕ ಕೆಲಸಕ್ಕೆ ಸಹಕಾರ ಸಿಕ್ಕಾಗ ಆಗದ ಮನಸ್ಸಿನ ತೊಳಲಾಟ ಅಸಹಕಾರ ಸಿಕ್ಕಾಗ ಸಹಜವಾಗಿ ಆಗುತ್ತದೆ. ಕೆಲವರ ಪ್ರಶ್ನೆ : ನಾವು ಸಮೀಕ್ಷೆಯಲ್ಲಿ ಭಾಗವಹಿಸದ ಮೇಲೆ ನಮ್ಮ ಮನೆಯ ಫೋಟೋ ನಿಮಗೇಕೆ? ನಮ್ಮ ಆದಾರ್, ಮತ್ತೊಂದು ಸೋರಿಕೆಯಾದರೆ ನೀವೇನು ಮಾಡುತ್ತೀರಿ? ಎಂಬ ಮಾತುಗಳಿಂದ ಒತ್ತಡವಾಗದೇ ಇದ್ದೀತೆ? ಎಷ್ಟು ಸಾರಿ ವಿಷಯವನ್ನು ತಿಳಿಯಪಡಿಸಲು ಪ್ರಯತ್ನಿಸಿದರೂ ಕೇಳದ ಮನಸ್ಥಿತಿಯವರು ಸಮೀಕ್ಷಾದಾರರನ್ನು ಕ್ಷುಲ್ಲಕವಾಗಿ ಕಾಣುವುದು ಯಾವ ನ್ಯಾಯ? ತಪ್ಪು ಮಾಡಿದರೆ ಬಯ್ಸಿಕೊಳ್ಳುವುದಕ್ಕೆ ಮನಸ್ಸು ಸದಾ ಸಿದ್ಧ ಆದರೆ ತಪ್ಪುಮಾಡದೇ ನಮ್ಮನ್ನು ಬಯ್ಯುವ ಕೆಲವರ ಮನಸ್ಸಿನ ವಿಚಿತ್ರ ವರ್ತನೆಗೆ ಏನು ಹೇಳಬೇಕು? ಅವರ ಮನಸ್ಸೂ ಯಾವುದೋ ತೊಳಲಾಟದಲ್ಲಿದೆ ಎನ್ನಬೇಕಲ್ಲವೆ? ಇನ್ನ ಅನೇಕ ಸಂದರ್ಭಗಳಲ್ಲಿ ನಾವು ಮಾಡುವ ಅಥವಾ ನಮಗೆ ಇನ್ನೊಬ್ಬರು ಮಾಡುವ ಮಾನಸಿಕ ಕಿರಿಕಿರಿಗಳಿಂದ ಮನಸ್ಸು ಖಿನ್ನವಾಗುತ್ತದೆ. ಆಗ ಸಹಜವಾಗಿ ತಾಕಲಾಟ, ತೊಳಲಾಟಗಳು ನಡೆಯುತ್ತವೆ. ಪರೀಕ್ಷೆ, ಸಂದರ್ಶನ, ಮುಂತಾದ ಸಮಯದಲ್ಕಿ ಈ ತೊಳಲಾಟ ಸಹಜ.

ಹೀಗೆ ಮನಸ್ಸಿನ ತೊಳಲಾಟಕ್ಕೆ ಇವು ಉದಾಹರಣೆ ಮಾತ್ರ. ಇಂತಹ ಅನೇಕ ಘಟನೆಗಳು ಮನೆಯಲ್ಲಿ ಒಳಗೆ, ಹೊರಗೆ ದಿನನಿತ್ಯ ನಡೆಯುತ್ತಲೇ ಇರುತ್ತವೆ. ಆದರೆ ಈ ಒತ್ತಡದಿಂದ ಹೊರಬರಲು ಧ್ಯಾನದಂತಹ ಮಾರ್ಗವನ್ನು ಕಂಡುಕೊಳ್ಳುವುದೇ ಶ್ರೇಯಸ್ಸು. ಚಿಕ್ಕಮಕ್ಕಳಲ್ಲಿ ಓದುವ ಬರೆಯುವ ಕಲಿಯುವ ಒತ್ತಡವಾದರೆ ದೊಡ್ಡವರಾದಂತೆ ಕೆಲಸ ದ ಒತ್ತಡ ಜಾಸ್ತಿಯಾಗುತ್ತದೆ. ಈ ಮನಸ್ಸಿನ ತೊಳಲಾಟ ಖಿನ್ನತೆಯ ಕಡೆಗೆ, ಆತ್ಮಹತ್ಯೆಯಕಡೆಗೆ ಒಬ್ಬ ವ್ಯಕ್ತಿಯನ್ನು ಒಯ್ಯಬಹುದು. ಈ ಹೋರಾಟದಿಂದ ಕೊಂಚ ಮುಕ್ತಿ ಪಡೆಯಬೇಕೆಂದರೆ ಬದುಕನ್ನು ಬಂದಂತೆ ಸ್ವೀಕರಿಸಬೇಕು. ಷಡ್ವೈರಿಗಳಿಂದ ದೂರವಿರಬೇಕು. ಕರ್ಮವನ್ನು ಮಾತ್ರ ಮಾಡುತ್ತ ಫಲವನ್ನು ಭಗವಂತನಿಗೇ ಬಿಡಬೇಕು. ಯೋಗ, ಧ್ಯಾನಗಳಂತ ಮನಸ್ಸನ್ನು ಶಾಂತಗೊಳಿಸುವ ಕ್ರಿಯೆಗಳನ್ನು ಪ್ರತಿದಿನ ಮಾಡಬೇಕು. ಋಣಾತ್ಮಕವಾಗಿ ಯೋಚಿಸುವ ಬದಲು ಧನಾತ್ಮಕವಾಗಿ ಯೋಚಿಸಬೇಕು. ಲಾಭ ನಷ್ಟಗಳನ್ನು, ಜಯ ಅಪಜಯಗಳನ್ನು ಸಮಾನವಾಗಿ ಸ್ವೀಕರಿಸಿ ಸ್ಥಿತಪ್ರಜ್ಞೆಯಿಂದ ಇರಬೇಕು. ಇದು ಕಷ್ಟಸಾಧ್ಯವಾದರೂ ಪ್ರಯತ್ನಿಸಿದರೆ ಖಂಡಿತಾ ಸಾಧ್ಯ.ತೊಳಲಾಡುವ ಮನಸ್ಸನ್ನು ಕೇಂದ್ರೀ ಕರಿಸುವ ಗುಣವನ್ನು ನಾವು ಹೊಂದಬೇಕಿದೆ.

**-ಶುಭಲಕ್ಷ್ಮಿ ಆರ್ ನಾಯಕ**

---


# ಅಂತರಂಗದ ತಳಮಳ

ತುಂಬಬೇಡವೋ ಮನುಜ ನೀನು ಮನದಿ
ಅಸತ್ಯ,ಅನೀತಿ, ಕುಟಿಲತೆ ವಂಚನೆ ದರ್ಪದಿ
ಮೂಡಿ ಮುಳುಗುವ ದಿನನಿತ್ಯದ ರವಿಯಂದದಿ
ಬದುಕು ಕಾಣೋ ತಾತ್ಕಾಲಿಕ ಮೂರು ದಿನದಿ!

ಸ್ವಾರ್ಥತೆಯಲಿ ಮಿಂದು ಬಾಳಿ ಏನು ಸಾಧಿಸುವಿ?
ಜಗಕೆ ನೋಟ ನೀಡಿ ನಗುಸೂಸಿ ಏನು ಗೆಲ್ಲುವಿ?
ಬೆನ್ನಿಗೆ ಚೂರಿ.. ಎದುರಿಗೆ ಹೂವ ಕೈಯಲಿ ಹಿಡಿಯುವಿ
ನಿನ್ನತನಕೆ ಬೆಲೆಯಿದೆ ಯಾವಾಗ ನೀನು ತಿಳಿಯುವಿ?
ಪರರ ಉಸಿರು ನಿಟ್ಟುಸಿರಾಗಿ ಬದಲಾಯಿಸುವೆಯಲ್ಲಾ?
ಬಣ್ಣದ ಮಾತು ನುಡಿವ ನಿನಗೆ ಜನರು ಸೇರುವರಲ್ಲಾ?
ಮುಖದ ಬಣ್ಣ ಬಿಳಿ; ಹೃದಯ ಕಪ್ಪಾಗಿದೆಯಲ್ಲಾ?
ನಿನ್ನ ನೀನು ಹೆಚ್ಚು ಎಂದು ಅರಿತು ಬಾಳುವೆಯಲ್ಲಾ?

ಬರುವುದು ಮುಂದೆ ನಿನಗೆ ನಿಟ್ಟುಸಿರು ಶಾಪವಾಗಿ
ನೊಂದ ಮನವ ಕೊಂದ ಉಸಿರು ಹೊರಳಿ ಉರುಳಾಗಿ
ಬೆಂದ ಅಂತರಂಗದ ತಳಮಳ ಸುಡುವ ಬೆಂಕಿಯಾಗಿ
ಉರಿಯಬೇಡ ಮನುಜ ಬದುಕು; ವಿಶ್ವಕೆ ಬೆಳಕಾಗಿ!!

**-ಶಾರದಾ ಶ್ರಾವಣಸಿಂಗ್**



ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16–11–2025 ಪುಟಗಳು:16

# ವೀರವನಿತೆ ಒನಕೆ ಓಬವ್ವ ಜಯಂತಿ




**ಕೊಪ್ಪಳ/ಕುಷ್ಟಗಿ :** ತಹಶೀಲ್ದಾರ ಕಾರ್ಯಾಲಯ ಕುಷ್ಟಗಿಯಲ್ಲಿ ಮಾನ್ಯ ತಹಶೀಲ್ದಾರ (ಗ್ರೇಡ್ 2) ಹಾಗೂ ಸಮಾಜದ ಮುಖಂಡರ ನೇತೃತ್ವದಲ್ಲಿ ವೀರವನಿತೆ ಒನಕೆ ಓಬವ್ವ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಜಯಂತಿಯನ್ನು ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಗ್ರೇಡ್ 2 ತಹಶೀಲ್ದಾರ್ ರಜನಿಕಾಂತ್ ಕೆಂಗೇರಿ ಮಾತನಾಡಿ ಬಾಲ್ಯದಿಂದಲೂ ಓಬವ್ವನ ಕಥೆಯನ್ನು ಕೇಳುತ್ತಾ ಬಂದಿದ್ದೇವೆ ಆಕೆಯ ಸಾಹಸ ಧೈರ್ಯ ಆತ್ಮಸ್ಥೈರ್ಯ ಇಂದಿನ ಯುವಶಕ್ತಿಗೆ ಪ್ರೇರಣೆ ಎಂದು ಹೇಳಿದರು.

ವಿಶೇಷ ಉಪನ್ಯಾಸ ನೀಡಿದ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಹೇಶ್ ಹಡಪದ ಅವರು " ಹೈದರಾಲಿಯ ಸೈನ್ಯದ ವಿರುದ್ಧ ಕೋಟೆಯನ್ನು ರಕ್ಷಿಸಲು ಏಕಾಂಗಿಯಾಗಿ ಹೋರಾಡಿದ ಒನಕೆ ಓಬವ್ವ ಅವರು 18ನೇ ಶತಮಾನದ ಚಿತ್ರದುರ್ಗದ ವೀರ ವನಿತೆಯಾಗಿದ್ದು ಹೈದರಾಲಿಯ ಆಕ್ರಮಣದ ಸಮಯದಲ್ಲಿ ತಮ್ಮ ಒನಕೆಯಿಂದ ಒಂಟಿಯಾಗಿ ಶತ್ರುಗಳನ್ನು ಎದುರಿಸಿ, ತನ್ನ ಪ್ರಾಣವನ್ನು ತ್ಯಾಗ ಮಾಡುವ ಮೂಲಕ ಕೋಟೆಯನ್ನು ರಕ್ಷಿಸಿದರು.

ಅವರ ಅಸಾಧಾರಣ ಧೈರ್ಯ, ಸಮಯ ಪ್ರಜ್ಞೆ ಮತ್ತು ದೇಶಭಕ್ತಿಯನ್ನು ನೆನಪಿಸಿಕೊಳ್ಳಲು, ಕರ್ನಾಟಕ ಸರ್ಕಾರವು ಪ್ರತಿ ವರ್ಷ ನವೆಂಬರ್ 11 ರಂದು ಅವರ ಜಯಂತಿಯನ್ನು ಆಚರಿಸುತ್ತದೆ. ಓಬವ್ವನ ಸಾಹಸ ಧೈರ್ಯ ಶೌರ್ಯದ ಮೂಲಕ ಇಂದಿನ ಮಹಿಳೆಯರಿಗೆ ಸ್ಫೂರ್ತಿ ಹಾಗೂ ಆದ–'ರ್ಶಮಯವಾಗಿದ್ದಾಳೆ ಎಂದರು.

ಈ ಸಂದರ್ಭದಲ್ಲಿ ಚೆನ್ನಪ್ಪ ಬಾವಿಮನಿ ರವರು ಓಬವ್ವನ ಕಥೆಯನ್ನು ಕವಿತೆಯ ಮೂಲಕ ಹಾಡಿದರು.

ಸಿದ್ದಪ್ಪ ಚಲವಾದಿ ,ರಾಮಚಂದ್ರಪ್ಪ ಚಲವಾದಿ ,ಹನುಮಂತಪ್ಪ ಚಲವಾದಿ ಹಾಗೂ ಶರಣಪ್ಪಹುಡೇದ ರವರು ಕಾರ್ಯಕ್ರಮ ನಿರ್ವಹಿಸಿದರು. ತಾಲೂಕು ಆಡಳಿತ ಸಿಬ್ಬಂದಿ ವರ್ಗ ಹಾಗೂ ಸಮಾಜ ಬಾಂಧವರು ಉಪಸ್ಥಿತರಿದ್ದರು.

**– ಕರುನಾಡ ಕಂದ**

---

# ನಾವೆಲ್ ಹೋಪ್ ಫೌಂಡೇಷನ್ ವತಿಯಿಂದ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಣೆ




ಕಲ್ಬುರ್ಗಿ ಜಿಲ್ಲೆಯ ಕಾಳಗಿ ತಾಲೂಕಿನ ರಟಕಲ್ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ 9ನೇ ಮತ್ತು 10 ನೇ ತರಗತಿಯಲ್ಲಿ ಓದುತ್ತಿರುವ ಸುಮಾರು 140 ವಿದ್ಯಾರ್ಥಿಗಳಿಗೆ ಈ ಶಾಲಾ ಬ್ಯಾಗುಗಳನ್ನು ನಾವೆಲ್ ಹೋಪ್ ಫೌಂಡೇಷನ್ ಬೆಂಗಳೂರು ಇವರ ವತಿಯಿಂದ ಉಚಿತವಾಗಿ ಕೊಡಲಾಯಿತು. ಹಾಗೂ ಇದಕ್ಕೆ ಶ್ರೀ ವಿಜಯಕುಮಾರ ಸರಕಾರಿ ಪ್ರೌಢ ಶಾಲೆ ಬಂದರವಾಡ ಇವರ ಸಂಪೂರ್ಣ ಸಹಕಾರದಿಂದ ನೆರವೇರಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ವೇದಿಕೆಯನ್ನು ಉದ್ದೇಶಿಸಿ ಶ್ರೀ ವೀರಣ್ಣ ಗಂಗಾಣಿ ಅಧ್ಯಕ್ಷರು ತಾಲೂಕ ರೈತ ಸಂಘ ಮಾತನಾಡಿದರು ಇದಕ್ಕೆ ಕಾರಣೀಭೂತರಾದ ರಟಕಲ್ ಶಾಲೆಯ ಶ್ರೀ ಶರಣಪ್ಪ ದೈಹಿಕ ಶಿಕ್ಷಣ ಶಿಕ್ಷಕರಿಗೆ, ರಟಕಲ್ ಗ್ರಾಮಸ್ಥರು ಮತ್ತು ಮಕ್ಕಳ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಮತ್ತು ಇದೇ ರೀತಿ ತಮ್ಮ ಫೌಂಡೇಶನ್ ವತಿಯಿಂದ ಇನ್ನೂ ಹೆಚ್ಚು ಹೆಚ್ಚು ಸಹಾಯ ,ಸಹಕಾರ ನಮ್ಮ ಶಾಲೆಗೆ ಇರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ವೀರೇಶ್ ಬುಕ್ಕಟಗಿ ಅಧ್ಯಕ್ಷರು ಎಸ್ ಡಿ ಎಂ ಸಿ, ಸದಸ್ಯರಾದ ಮಲ್ಲಿನಾಥ ಪಾರ, ಸಚಿನ್ ನಂಗಾರಿ, ಸಿಬ್ಬಂದಿ ವರ್ಗದವರು ಶ್ರೀಮತಿ ಶಶಿಕಲಾ ಮುಖ್ಯಗುರುಗಳು, ಶ್ರೀ ಅಮೃತ ಸಹ ಶಿಕ್ಷಕರು, ಶ್ರೀಮತಿ ಲಕ್ಕಮ್ಮ ಸಹ ಶಿಕ್ಷಕರು, ಶ್ರೀ ಶರಣಪ್ಪ ದೈಹಿಕ ಶಿಕ್ಷಣ ಶಿಕ್ಷಕರು, ಕು. ಜಯಶ್ರೀ ಸಹ ಶಿಕ್ಷಕರು, ಶ್ರೀ ಬಸವರಾಜ್ ವಿಶೇಷ ಶಿಕ್ಷಕರು, ಕುಮಾರ ಸಿದ್ದು ಅತಿಥಿ ಶಿಕ್ಷಕರು, ಕುಮಾರ ಶೇಖ್ ಅಹಮದ್ ಅತಿಥಿ ಶಿಕ್ಷಕರು ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

**ವರದಿ ಎಸ್ ವಿ ಗಂಗಾಣಿ.**

---






ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16

# ಒಂದಲ್ಲ ಎರಡಲ್ಲ ಒಟ್ಟು 7 ಕನ್ನಡ ಚಿತ್ರಗಳು ಈ ವಾರ ರಿಲೀಸ್



'ಕಾಂತಾರ-1' ಆರ್ಭಟ ಕಮ್ಮಿ ಆಯ್ತು. ಓಟಿಟಿಗೂ ಬಂದಾಯ್ತು. ಡಿಸೆಂಬರ್‌ನಲ್ಲಿ ಕನ್ನಡದ ದೊಡ್ಡ ದೊಡ್ಡ ಸಿನಿಮಾಗಳು ತೆರೆಗಪ್ಪಳಿಸುತ್ತಿವೆ. ಆದರೆ ರಾಜ್ಯೋತ್ಸವ ಮಾಸವನ್ನು ಯಾರೂ ಬಳಸಿಕೊಳ್ಳುತ್ತಿಲ್ಲ. ದೊಡ್ಡ ಸಿನಿಮಾಗಳು ಈ ತಿಂಗಳು ಬರ್ತಿಲ್ಲ. ಕಳೆದ ವಾರ ಕೂಡ ಸಣ್ಣ ಸಿನಿಮಾಗಳೇ ಪ್ರೇಕ್ಷಕರ ಮುಂದೆ ಬಂದಿತ್ತು. ಈ ವಾರ ಒಂದಷ್ಟು ಇಂಟ್ರೆಸ್ಟಿಂಗ್ ಸಿನಿಮಾಗಳು ಬಿಡುಗಡೆ ಆಗ್ತಿದೆ. ವಿಭಿನ್ನ ಜಾನರ್ ಚಿತ್ರಗಳು ಪಟ್ಟಿಯಲ್ಲಿದೆ. ಟ್ರೈಲರ್, ಸಾಂಗ್ಸ್ ರಿಲೀಸ್ ಆಗಿ ಸದ್ದು ಮಾಡಿ ಭರವಸೆ ಮೂಡಿಸಿವೆ. ಒಂದಲ್ಲ ಎರಡಲ್ಲ 7 ಸಿನಿಮಾಗಳು ಕನ್ನಡ ಪ್ರೇಕ್ಷಕರ ಮುಂದೆ ಬರ್ತಿದೆ. ಇನ್ನಷ್ಟು ಅನ್ವೇಷಿಸಿ ಒಂದಲ್ಲ ಎರಡಲ್ಲ ಖಣ ಈಡಿಠಟ ಖಠ ಕಾಂತಾರ ಒಂದಲ್ಲ ಎರಡಲ್ಲ ಒಂದಲ್ಲಾ ಎರಡಲ್ಲಾ ವಿಡಿಯೋ ಎಕ್ಕ ಂಟಠ ಖಜಚಿಜ ತಂದೆ ವಿರೋಧ, 'ಗತವೈಭವ' ಪಾತ್ರ, ನಟನೆ ಅನುಭವ- ನಟ ದುಷ್ಯಂತ್ ಸಂದರ್ಶನ

1. ಗತವೈಭವ ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾ ಕೊನೆಗೂ ಈ ವಾರ ಬಿಡುಗಡೆ ಆಗ್ತಿದೆ. ಬಹಳ ಹಿಂದೆ ಸೆಟ್ಟೇರಿದ್ದ ಸಿನಿಮಾ ಕಾರಣಾಂತರಗಳಿಂ ತಡವಾಗಿತ್ತು. ದುಷ್ಯಂತ್ ಜೊತೆ ಆಶಿಕಾ ರಂಗನಾಥ್ ಈ ಚಿತ್ರದಲ್ಲಿ ನಟಿಸಿದ್ದಾರೆ. ಇಬ್ಬರೂ ಬೇರೆ ಬೇರೆ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ರಾಕ್ಷಸ, ವಾಸ್ಕೋಡಗಾಮನ ಸಹಚರ, ಕಂಬಳದ ವೀರ ಹೀಗೆ ಭಿನ್ನ ವಿಭಿನ್ನ ಅವತಾರದಲ್ಲಿ ದುಷ್ಯಂತ್ ಮಿಂಚಿದ್ದಾರೆ. ಎಲ್ಲಾ ಕಡೆ ಆಶಿಕಾ ಆತನಿಗೆ ಜೊತೆಯಾಗಿ ಕಾಣಿಸಿಕೊಳ್ಳುತ್ತಾರೆ. ಚಿತ್ರದಲ್ಲಿ ನಾಯಕ ಗ್ರಾಫಿಕ್ ಡಿಸೈನರ್ ಆಗಿದ್ದು. ಆತನ ಕಲ್ಪನೆಯಲ್ಲಿ ಸಿನಿಮಾ ಕಥೆ ಸಾಗುತ್ತದೆ.


2. ಲವ್ ಓಟಿಪಿ ಅನೀಶ್ ತೇಜೇಶ್ವರ್ ನಿರ್ದೇಶಿಸಿ ನಟಿಸಿರುವ ರೊಮ್ಯಾಂಟಿಕ್ ಸಿನಿಮಾ 'ಲವ್ ಓಟಿಪಿ' ಕೂಡ ಈ ವಾರ ಪ್ರೇಕ್ಷಕರ ಮುಂದೆ ಬರಲಿದೆ. ಎಂ. ವಿಜಯ್ ರೆಡ್ಡಿ ಚಿತ್ರಕ್ಕೆ ಹಣ ಹೂಡಿದ್ದಾರೆ. ಅನೀಶ್ ತೇಜೇಶ್ವರ್ ಜೊತೆ ಪ್ರಮೋದಿನಿ, ಸ್ವರೂಪಿಣಿ ಚಿತ್ರದಲ್ಲಿ ಬಣ್ಣ ಹಚ್ಚಿದ್ದಾರೆ. ಲವ್, ಆಕ್ಷನ್, ಫ್ಯಾಮಿಲಿ ಸೆಂಟಿಮೆಂಟ್, ಕ್ರಿಕೆಟ್ ಹೀಗೆ ಸಾಕಷ್ಟು ವಿಚಾರಗಳು ಈ ಚಿತ್ರದಲ್ಲಿದೆ.

3. ಉಡಾಳ ರವಿ ಶಾಮನೂರು ಹಾಗೂ ಯೋಗರಾಜ್ ಭಟ್ ನಿರ್ಮಾಣದ ಸಿನಿಮಾ 'ಉಡಾಳ'. ಇದು ಪಕ್ಕಾ ಜವಾರಿ ಸಿನಿಮಾ. ಈ ಹಿಂದೆ 'ಪದವಿಪೂರ್ವ' ಚಿತ್ರದಲ್ಲಿ ನಟಿಸಿದ್ದ ಪೃಥ್ವಿ ಶಾಮನೂರು ನಟನೆಯಯ ಎರಡನೇ ಸಿನಿಮಾ. ನವೀನ್ ಶಂಕರ್ ಹಾಗೂ ನಿಶ್ವಿಕಾ ನಾಯ್ಡು ಇತ್ತೀಚೆಗೆ ಚಿತ್ರದ ಟ್ರೈಲರ್ ಲಾಂಚ್ ಮಾಡಿದ್ದರು. ಬಹುತೇಕ ಉತ್ತರಕರ್ನಾಟಕದಲ್ಲಿ ನಡೆಯುವ ಕಥೆ ಇದಾಗಿದ್ದು ಅಲ್ಲಿನ ಭಾಷೆಯನ್ನೇ ಬಳಸಿಕೊಳ್ಳಲಾಗಿದೆ. ಅಮೋಲ್ ಪಾಟೀಲ್ ಆಕ್ಷನ್ ಕಟ್ ಹೇಳಿದ್ದಾರೆ.

4. ಚಿತ್ರಗಳು ಈ ವಾರ ತೆರೆಗೆ ಬರ್ತಿವೆ. 'ಕೈಟ್ ಬ್ರದರ್ಸ್' ಎಂಬ ಮಕ್ಕಳ ಸಿನಿಮಾ ಕೂಡ ಲಿಸ್ಟ್‌ನಲ್ಲಿದೆ. 'ಪ್ರೇಮಂ ಮಧುರಂ' ಎನ್ನುವ ಮತ್ತೊಂದು ಲವ್ ಸ್ಟೋರಿ ಸಿನಿಮಾ ಬಿಡುಗಡೆಗೆ ಅಣಿಯಾಗಿದೆ. 'ಇನಿಯನ ಆತ್ಮ' ಎಂಬ ಹಾರರ್ ಸಿನಿಮಾ ಕೂಡ ತೆರೆಗಪ್ಪಳಿಸಲು ಸಜ್ಜಾಗಿದೆ. ಬಹಳ ಹಿಂದೆ ಶುರುವಾಗಿದ್ದ 'ಹಿಕೋರ' ಚಿತ್ರಕ್ಕೂ ಬಿಡುಗಡೆ ಭಾಗ್ಯ ಸಿಗಲಿದೆ.

# ಆಮಿರ್ ಖಾನ್ ಮೆಚ್ಚಿದ 'ತಿಥಿ' ಗಡ್ಡಪ್ಪನ ಬದುಕು ಬದಲಿಸಲಿಲ್ಲ; ಈ ಸಿನಿಮಾಗೆ ಸಿಕ್ಕಿದ್ದ ಸಂಭಾವನೆ ಎಷ್ಟು ಗೊತ್ತೇ?






ತಿಥಿ' ಕನ್ನಡ ಚಿತ್ರರಂಗದ ದಿಕ್ಕನ್ನೇ ಬದಲಿಸಿದ ಸಿನಿಮಾ. ಈಗಿನಂತೆ ಪ್ಯಾನ್ ಇಂಡಿಯಾ ಟ್ರೆಂಡ್ ಇದ್ದಿದ್ದರೆ, ಇನ್ನೂ ದೊಡ್ಡ ಮಟ್ಟಕ್ಕೆ ಸದ್ದು ಮಾಡುತ್ತಿತ್ತು. ಹಾಗಂತ ಈ ಸಿನಿಮಾ ದೇಶದ ಗಮನ ಸೆಳೆಯುವಲ್ಲಿ ಯಶಸ್ವಿ ಆಯ್ತು. ಯುವ ಪ್ರತಿಭೆಗಳಾದ ನಿರ್ದೇಶಕ ರಾಮ್ ರೆಡ್ಡಿ ಹಾಗೂ ಚಿತ್ರಕಥೆ ಬರೆದಿದ್ದ ಈರೇಗೌಡ ದಿಗ್ಗಜರ ಗಮನ ಸೆಳೆದಿದ್ದರು. ಈ ಸಿನಿಮಾ ಥಿಯೇಟರ್‌ಗೆ ಲಗ್ಗೆ ಇಡುವುದಕ್ಕೂ ಮುನ್ನ ಸಾಕಷ್ಟು ಫಿಲ್ಮ್ ಫೆಸ್ಟಿವಲ್‌ಗಳಲ್ಲಿ ಗೆದ್ದು ಬಂದಿತ್ತು. ಅದ್ಯಾವಾಗ ಥಿಯೇಟರ್‌ಗೆ ಲಗ್ಗೆ ಇಟ್ಟಿತೋ ಅಲ್ಲಿಂದ ಈ ಸಿನಿಮಾ ಕ್ರೇಜ್ ಇನ್ನೋ ಹೆಚ್ಚು ಸದ್ದು ಮಾಡಿತ್ತು. ಈ ಸಿನಿಮಾ ಮಂಡ್ಯದ ಸಣ್ಣ ಗ್ರಾಮದ ಹಣ್ಣು ಮುದುಕನ ಬದುಕನ್ನು ದೇಶದ ಜನರ ಮುಂದೆ ತಂದು ನಿಲ್ಲಿಸಿತ್ತು. ನಟನೆಯ ಗಂಧ ಗಾಳಿಯೂ ಗೊತ್ತಿರದ ತೀರಾ ಕಡು ಬಡತನ ಇಳಿ ವಯಸ್ಸಿನ ಗಡ್ಡಪ್ಪ ಅಲಿಯಾಸ್ ಚನ್ನೇಗೌಡ ದೇಶಾದ್ಯಂತ ಫೇಮಸ್ ಆಗಿದ್ದರು. ಸಿನಿಮಾ ನೋಡಿ ಜನರು ಹೊಗದ್ದೇ ಹೊಗಳಿದ್ದು. ಹೊಗಳಿ ಅಟ್ಟಕ್ಕೆ ಏರಿಸಿದ್ದರು. ಮಂಡ್ಯದ ನೊದೆಕೊಪ್ಪಲು ಗ್ರಾಮದ ಚನ್ನೇಗೌಡ ರಾತ್ರೋ ರಾತ್ರಿ ಗಡ್ಡಪ್ಪನಾಗಿ ಫೇಮಸ್ ಆಗಿಬಿಟ್ಟಿದ್ದರು. ತನ್ನ ಬದುಕಿನ ಕೊನೆಯ ಘಟ್ಟದಲ್ಲಿ ಸಿಕ್ಕಿದ ಈ ಜನಪ್ರಿಯತೆಯನ್ನು ಹೇಗೆ ತೆಗೆದುಕೊಳ್ಳಬೇಕು ಅನ್ನೋ ಗೊಂದಲ. ತನ್ನನ್ನು ಹುಡುಕಿಕೊಂಡು ಬರುವ ಸಿನಿಮಾ ಮಂದಿಗಳ ಜೊತೆ ಹೇಗೆ ಮಾತಾಡಬೇಕು ಅಂತ ತಿಳಿಯದ ಮುಗ್ಧ ಮನಸ್ಸು. ಇಂತಹ ಮನಸ್ಸುಗಳನ್ನು ಬಳಸಿಕೊಳ್ಳುವುದಕ್ಕೆ ಕಾಯುತ್ತಿದ್ದ ಸಿನಿಮಾ ಮಂದಿ. ಇವೆಲ್ಲದರ ನಡುವೆ ಗಡ್ಡಪ್ಪನ ಬದುಕು ಬದಲಾಗಲೇ ಇಲ್ಲ. ಬದುಕು ಬದಲಿಸಿತೇ 'ತಿಥಿ'? 'ತಿಥಿ' ಬಂದು ಫೇಮಸ್ ಆಯ್ತು. ಇಡೀ ರಾಷ್ಟ್ರವೇ ಮೆಚ್ಚಿದ್ದಕ್ಕೆ ರಾಷ್ಟ್ರ ಪ್ರಶಸ್ತಿನೂ ಬಂದಿತ್ತು. ಬಾಲಿವುಡ್‌ನ ಮಿಸ್ಟರ್ ಪರ್ಫೆಕ್ಷನಿಸ್ಟ್ ಆಮಿರ್ ಖಾನ್ ಕೂಡ ಸಿನಿಮಾ ಮೆಚ್ಚಿಕೊಂಡಾಡಿದ್ದರು. 'ತಿಥಿ' ಸಿನಿಮಾವನ್ನು ಗಡ್ಡಪ್ಪನ ಪರ್ಫಾರ್ಮೆನ್ಸ್ ಅನ್ನು ಬಾಯ್ತುಂಬ ಹೊಗಳಿದ್ದರು. ಇಲ್ಲಿಂದ ಗಡ್ಡಪ್ಪನ ಬದುಕು ಬದಲಾಯ್ತು. ಇಳಿ ವಯಸ್ಸಿನಲ್ಲಿ ಬಡತನಕ್ಕೆ ಮುಕ್ತಿ ಸಿಕ್ಕಿತು ಅಂತೆಲ್ಲ ಮಾತಾಡಿಕೊಂಡರು. ಅಸಲಿಗೆ ಗಡ್ಡಪ್ಪನ ಬದುಕೇನು ಬದಲಾಗಲಿಲ್ಲ ಅನ್ನೋದು ವಿಪರ್ಯಾಸ.

'ತಿಥಿ' ಚಿತ್ರದ ಗಡ್ಡಪ್ಪ ಖ್ಯಾತಿಯ ನಟ ಚನ್ನೇಗೌಡ್ರು ವಿಧಿವಶ 'ತಿಥಿ'ಗೆ ಸಿಕ್ಕಿದ ಸಂಭಾವನೆಯೇ ಹೆಚ್ಚು! 2016ರಲ್ಲಿ ತೆರೆಕಂಡ ಸಿನಿಮಾ 'ತಿಥಿ' ಮೂಲಕ ಗಡ್ಡಪ್ಪ ಜನಪ್ರಿಯತೆ ಗಳಿಸಿದರು. ಈ ಸಿನಿಮಾದಲ್ಲಿ ನಟನೆ ಬಾರದ ಸ್ಥಳೀಯರನ್ನೇ ಇಟ್ಟುಕೊಂಡು ಸಿನಿಮಾ ಮಾಡುವುದಕ್ಕೆ ನಿರ್ದೇಶಕ ರಾಮ್ ರೆಡ್ಡಿ ಮುಂದಾಗಿದ್ದರು. ಹೀಗೆ ಹುಡುಕಾಟದಲ್ಲಿ ಇದ್ದಾಗ ಚಿತ್ರತಂಡಕ್ಕೆ ಅವರ ಕಲ್ಪನೆಯಂತೆ ಗಡ್ಡ ಬಿಟ್ಟುಕೊಂಡು ಮಂಡ್ಯದ ನೊದೆಕೊಪ್ಪಲು ಗ್ರಾಮದಲ್ಲಿ ಓಡಾಡಿಕೊಂಡಿದ್ದವರು ಚೆನ್ನೇಗೌಡರು. ಕೊನೆಗೆ ಇವರನ್ನೇ ಒಪ್ಪಿಸಿ ಗಡ್ಡಪ್ಪನನ್ನಾಗಿ ಪರಿವರ್ತಿಸಿದರು. ಈಗಾಗಲೇ ಕೆಲವೆಡೆ ವರದಿಯಾಗಿರುವಂತೆ 'ತಿಥಿ' ಸಿನಿಮಾಗೆ ಗಡ್ಡಪ್ಪನಿಗೆ ಸಿಕ್ಕಿದ ಸಂಭಾವನೆ 50 ಸಾವಿರ ರೂಪಾಯಿ. ಇದೇ ಅವರ ವೃತ್ತಿ ಬದುಕಿನಲ್ಲಿ ಪಡೆದ ಅತೀ ದೊಡ್ಡ ಸಂಭಾವನೆ. ಗಡ್ಡಪ್ಪನನ್ನು ಬಳಿಸಿಕೊಂಡವರೇ ಒಬ್ಬಿಬ್ಬರಲ್ಲ 'ತಿಥಿ' ಗಡ್ಡಪ್ಪ ಅಂತಲೇ ಜನಪ್ರಿಯತೆ ಸಿಕ್ಕಿದ ಮೇಲೆ ಸೆಲ್ಫಿಗಾಗಿ ಮನೆ ಮುಂದೆ ಬರುತ್ತಿದ್ದವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ಇನ್ನೊಂದು ಕಡೆ ಸಿನಿಮಾ ಮಂದಿಯ ಸಂಖ್ಯೆಯೂ ಹೆಚ್ಚಾಯ್ತು. ರಾಷ್ಟ್ರ ಮಟ್ಟದಲ್ಲಿ ಹೆಸರು ಸಿಕ್ಕಿದ ಮುಗ್ಧ ಜೀವವನ್ನು ಬಳಸಿಕೊಳ್ಳುವ ಖಯಾಲಿ ಇಲ್ಲಿಂದ ಶುರುವಾಗಿತ್ತು. ಬಾಯಿಗೆ ಬಂದ ಸಂಭಾವನೆ ಕೊಟ್ಟರು. ಮೂಲಗಳ ಪ್ರಕಾರ, 'ತಿಥಿ' ಬಳಿಕ ಗಡ್ಡಪ್ಪಗೆ ಸಿಗುತ್ತಿದ್ದ ಸಂಭಾವನೆ ಬರೀ ಐದು ಸಾವಿರ ಅಷ್ಟೇ. ಹೀಗಾಗಿ ಕೊನೆಯ ಕ್ಷಣಗಳಲ್ಲಿ ಅವರು ಅರ್ಥಿಕವಾಗಿ ಸಬಲರಾಗಿರಲಿಲ್ಲ ಅನ್ನೋದು ಬಲ್ಲವರ ಮಾತು. ಅನಾರೋಗ್ಯ.. ತಿರಸ್ಕಾರ 'ತಿಥಿ' ಬಳಿಕ ಸಿನಿಮಾ ಮಾಡುವುದಕ್ಕೆ ಅದೆಷ್ಟೋ ಮಂದಿ ಗಡ್ಡಪ್ಪನನ್ನು ಇಟ್ಟುಕೊಂಡು ಸಿನಿಮಾ ಮಾಡುವುದಕ್ಕೆ ಬಂದಿದ್ದರು. ಕೆಲವರು ಅವರ ಜೊತೆ ಸಿನಿಮಾವನ್ನೂ ಮಾಡಿದರು. ಡಬಲ್ ಮೀನಿಂಗ್ ಡೈಲಾಗ್ ಹೇಳಿಸಿದರು. ಅವರ ಇಮೇಜ್ ಡ್ಯಾಮೇಜ್ ಮಾಡಿದರು. ಇದೇ ವೇಳೆ ಗಡ್ಡಪ್ಪ ಹೃದಯ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿದ್ದರು. ಇದಕ್ಕೆ ಸರಿಯಾಗಿ ಸ್ಟ್ರೋಕ್ ಆಗಿ ಹಾಸಿಗೆ ಹಿಡಿದರು. ಸೆಲ್ಫಿಗೆ ಹುಡುಗಿಕೊಂಡು ಬರುವವರು ಸಹಾಯಕ್ಕೆ ಬರಲಿಲ್ಲ. ಸಿನಿಮಾದವರು ಹತ್ತಿರಕ್ಕೂ ಸುಳಿಯಲಿಲ್ಲ. ಗಡ್ಡಪ್ಪ ಅವತಾರದ ಚನ್ನೇಗೌಡ ಕೊನೆಯ ದಿನಗಳಲ್ಲಿ ಪ್ರೀತಿಸಿದ್ದಕ್ಕಿಂತ ತಿರಸ್ಕಾರಕ್ಕೆ ಒಳಗಾದವರೇ ಹೆಚ್ಚು.

ಕರುನಾಡ ಕಂದ
ಸಂಪುಟ 05 । ಸಂಚಿಕೆ 02
ದಿನಾಂಕ: 16-11-2025 ಪುಟಗಳು:16

# ಸಾಲುಮರದ ತಿಮ್ಮಕ್ಕ ಇನ್ನೆಲ್ಲಿ?

ಮಕ್ಕಳಿಲ್ಲ ಎಂದು ಕೊರಗಲಿಲ್ಲ
ಮರಗಳನೇ ಮಕ್ಕಳೆಂದಳಲ್ಲ,
ವೃಕ್ಷ ಮಾತೆ ಇವಳಾದಳಲ್ಲ,
ನೂರಾ ಹದಿನಾಲ್ಕು ವಸಂತಗಳ
ತುಂಬು ಜೀವನ ನಡೆಸಿದಳಲ್ಲ,
ಸಾರ್ಥಕವಾಯಿತು ಜೀವನವೆಲ್ಲ,
ಸಾಲು ಮರದ ತಿಮ್ಮಕ್ಕ ಇನ್ನಿಲ್ಲ,
ಅವಳು ಬೆಳೆಸಿದ ಮರಗಳಿಗೆ
ಸಾವಿಲ್ಲ.

– – ಶಿವಪ್ರಸಾದ್ ಹಾದಿಮನಿ



# ಚಿತ್ತಾಪುರ :ದೀಪೋತ್ಸವ ಕಾರ್ಯಕ್ರಮ



**ಕಲಬುರಗಿ :** ಚಿತ್ತಾಪುರದಲ್ಲಿ ರಾಷ್ಟ್ರಕೂಟರ ಕುಲದೇವತೆಯಾದ ಶ್ರೀ ನಾಗಾವಿ ಯಲ್ಲಮ್ಮ ದೇವಿಯ ದೇವಸ್ಥಾನದಲ್ಲಿ, ಪ್ರತಿವರ್ಷದಂತೆ ಈ ವರ್ಷವೂ ದೀಪೋತ್ಸವ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮಕ್ಕೆ ಕಂಬಳೇಶ್ವರ ಶ್ರೀಗಳು ಚಾಲನೆ ನೀಡಿ ಆಶೀರ್ವಚನ ನೀಡಿದರು. ಅರ್ಚಕರಾದ ಶ್ರೀ ಶಿವಕುಮಾರ್ , ಭೀಮಣ್ಣ ಮತ್ತು ಶರಣು ಪೂಜಾರಿಯವರು ಶ್ರೀಗಳಿಗೆ ಸನ್ಮಾನಿಸಿ ಗೌರವಿಸಿದರು. ಸರ್ವ ಶಾಸ್ತ್ರಿಗಳು, ದುರ್ಗಾ ವಾಹಿನಿ, ಮತ್ತು ಮಾತೃ ಶಕ್ತಿ ಮಾತೆಯರು, ಬೋಲೆನಾಥ್ ಭಜನಾ ಮಂಡಳಿಯವರು ಸೇರಿದಂತೆ ಸಹಸ್ರಾರು ಭಕ್ತರು ಪಾಲ್ಗೊಂಡಿದ್ದರು.

**ವರದಿ ಮಂಜುನಾಥ ಶಾಸ್ತ್ರಿ ,ಚಿತ್ತಾಪುರ**

# 72ನೇ ಅಖಿಲ ಭಾರತ ಸಹಕಾರ ಸಪ್ತಾಹ –2025



**ಕೊಪ್ಪಳ :** ಗಂಗಾವತಿ ತಾಲೂಕಿನ ಡಣಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹ –2025 ಪ್ರಯುಕ್ತ ಡಣಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಧ್ವಜಾರೋಹಣ ಮಾಡಲಾಯಿತು.

ಸಹಕಾರ ಪಿತಾಮಹ ಕಣಗಿನಹಾಳ ಸಿದ್ದನಗೌಡ ಪಾಟೀಲ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸಹಕಾರ ಸಪ್ತಾಹ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಎನ್ ರಾಮಬಾಬು ಹಾಗೂ ಸಂಘದ ನಿರ್ದೇಶಕರು , ರೈತರಾದ ನರಸಯ್ಯ ಎಂ. ಹಾಗೂ ಈರಣ್ಣ ಬಡಿಗೇರ , ಮಂಜುನಾಥ ಹೆಚ್ , ಭುವನೇಶ ಎಂ., ಕಾರ್ಯದರ್ಶಿ ಹನುಮೇಶ ಭಾವಿಕಟ್ಟಿ , ಕೆ. ಬುಡ್ಡಪ್ಪ , ಪಂಪನಗೌಡ , ಮಂಜುನಾಥ , ತಿಪ್ಪೇಸ್ವಾಮಿ ಭಾಗಿ ಇದ್ದರು.

**– ಕರುನಾಡ ಕಂದ**




## ಕರುನಾಡ ಕಂದ ಪತ್ರಿಕೆಯ ವಾರ್ಷಿಕ ಚಂದಾ ವಿವರ

ವಾರ್ಷಿಕ ಚಂದಾ =500/– ರೂಪಾಯಿಗಳು ಮಾತ್ರ (ಅಂಚೆ ವೆಚ್ಚ ಸೇರಿ)

ಫೋನ್ ಪೇ,ಗೂಗಲ್ ಪೇ ಅಥವಾ ಕ್ಯೂ ಆರ್ ಕೋಡ್ ಮೂಲಕ ಹಣ ಪಾವತಿಸಿ ನಿಮ್ಮ ಸಂಪೂರ್ಣ ವಿಳಾಸವನ್ನು ವಾಟ್ಸ್ ಆಪ್ ಮಾಡಿ.

KARUNADA KANDA

–ಬಸವರಾಜ ಬಳಿಗಾರ,
ಸಂಪಾದಕರು (9742776385)

KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR